# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1183 |
| ಸದಸ್ಯರ ಹೆಸರು | : | ಶ್ರೀಮತಿ ಬಲ್ಕೀಸ್ ಬಾನು (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 13.03.2026. |
| ಉತ್ತರಿಸುವವರು | : | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಎಷ್ಟು ಘನ ತ್ಯಾಜ್ಯ ವಿಲೇವಾರಿ ಘಟಕಗಳಿವೆ; ಅದನ್ನು ಯಾರ ಮೂಲಕ ನಿರ್ವಹಣೆಯನ್ನು ಮಾಡಲಾಗುತ್ತಿದೆ; (ಜಿಲ್ಲಾವಾರು ವಿವರ ನೀಡುವುದು) | ರಾಜ್ಯದಲ್ಲಿ ಒಟ್ಟು 5076 ಘನ ತ್ಯಾಜ್ಯ ವಿಲೇವಾರಿ ಘಟಕಗಳಿವೆ. GPLF/SHG ಒಕ್ಕೂಟಗಳಿಂದ ತ್ಯಾಜ್ಯ ಸಂಗ್ರಹಣೆ ವಿಲೇವಾರಿ ಮತ್ತು ನಿರ್ವಹಣೆ ಮಾಡಲಾಗುತ್ತಿದೆ.<br>ಜಿಲ್ಲಾವಾರು ವಿವರವನ್ನು ಅನುಬಂಧ-1 ರಲ್ಲಿ ನೀಡಿದೆ. |
| (ಆ) | ಶಿವಮೊಗ್ಗ ಜಿಲ್ಲೆಯ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಗೆ ಬರುವ ಘಟಕಗಳು ಎಷ್ಟು; (ವಿವರ ನೀಡುವುದು) | ಶಿವಮೊಗ್ಗ ಜಿಲ್ಲೆಯಲ್ಲಿ ಒಟ್ಟು 262 ಗ್ರಾಮ ಪಂಚಾಯಿತಿಗಳಿದ್ದು, ಅವುಗಳ ಪೈಕಿ ಸ್ವಚ್ಛ ಭಾರತ್ ಮಿಷನ್ (ಗ್ರಾ) ಮತ್ತು ನರೇಗಾ ಯೋಜನೆಯಡಿಯಲ್ಲಿ 196 ಗ್ರಾಮ ಪಂಚಾಯಿತಿಗಳಲ್ಲಿ ಹೊಸ ಸ್ವಚ್ಛ ಸಂಕೀರ್ಣ ಕಟ್ಟಡ ನಿರ್ಮಾಣ ಮಾಡಲಾಗಿರುತ್ತದೆ ಹಾಗೂ 44 ಗ್ರಾಮ ಪಂಚಾಯಿತಿಗಳಲ್ಲಿ ಹಳೆ ಕಟ್ಟಡ ಮತ್ತು 22 ಗ್ರಾಮ ಪಂಚಾಯತಿಗಳು ಮಹಾನಗರ ಪಾಲಿಕೆ, ನಗರ ಸಭೆ ಹಾಗೂ ಪಟ್ಟಣ ಪಂಚಾಯಿತಿಗಳ ಮೂಲಕ ತ್ಯಾಜ್ಯ ಸಂಗ್ರಹಣೆ ಮತ್ತು ನಿರ್ವಹಣೆಯನ್ನು ಮಾಡಲಾಗುತ್ತಿದೆ. |
| (ಇ) | ಈ ಘಟಕಗಳ ನಿರ್ವಹಣೆ ಮಾಡಲು ವರ್ಷಕ್ಕೆ ತಗಲುವ ವೆಚ್ಚವೆಷ್ಟು; ಅದರಲ್ಲಿ ರಾಜ್ಯ ಸರ್ಕಾರದ ಅನುದಾನವೆಷ್ಟು; ಕೇಂದ್ರ ಸರ್ಕಾರದ ಅನುದಾನವೆಷ್ಟು; | ದಿನಾಂಕ:18.07.2022 ರಂದು ಸರ್ಕಾರದಿಂದ ಹೊರಡಿಸಲಾದ ಸುತ್ತೋಲೆಯನ್ವಯ ಪ್ರತಿ ಘಟಕಗಳ ನಿರ್ವಹಣೆಗಾಗಿ ಮಾಹೆಯಾನ ₹ 59,500/- ವೆಚ್ಚ ತಗಲುವುದಾಗಿ ಅಂದಾಜಿಸಿದ್ದು, ಅದರಂತೆ ಪ್ರತಿ ಘಟಕಕ್ಕೆ ವಾರ್ಷಿಕವಾಗಿ ಅಂದಾಜು ₹ 7,14,000/-ಗಳು ತಗುಲುತ್ತಿದ್ದು ಘನ ತ್ಯಾಜ್ಯ ಘಟಕ ನಿರ್ವಹಣೆ ವೆಚ್ಚವನ್ನು ಬಳಕೆದಾರರ ಶುಲ್ಕ, ತ್ಯಾಜ್ಯ ಮಾರಾಟದಿಂದ ಬಂದ ಆದಾಯ ಮತ್ತು ಗ್ರಾಮ ಪಂಚಾಯಿತಿ ಸ್ವಂತ ಸಂಪನ್ಮೂಲದಿಂದ ಭರಿಸಲಾಗುತ್ತಿದ್ದು, ರಾಜ್ಯ/ಕೇಂದ್ರ ಸರ್ಕಾರದಿಂದ ಯಾವುದೇ ಅನುದಾನ ಬಿಡುಗಡೆಗೊಳಿಸಲಾಗುವುದಿಲ್ಲ. |

| | | |
|---|---|---|
| (ಈ) | ಈ ಘಟಕ ನಿರ್ವಹಣೆಗೆ ತಗಲುವ ವೆಚ್ಚವನ್ನು ಯಾವ ಅನುದಾನದಿಂದ ಬಿಡುಗಡೆ ಮಾಡಲಾಗುತ್ತಿದೆ: ಮತ್ತು ಮುಂದಿನ ವರ್ಷಗಳಲ್ಲಿ ಇದರ ನಿರ್ವಹಣೆ ಬಗ್ಗೆ ಕೈಗೊಳ್ಳಲಿರುವ ಕ್ರಮಗಳೇನು? | ಘನ ತ್ಯಾಜ್ಯ ಘಟಕ ನಿರ್ವಹಣೆ ವೆಚ್ಚವನ್ನು ಬಳಕೆದಾರರ ಶುಲ್ಕ, ತ್ಯಾಜ್ಯ ಮಾರಾಟದಿಂದ ಬಂದ ಆದಾಯ ಮತ್ತು ಗ್ರಾಮ ಪಂಚಾಯಿತಿ ಸ್ವಂತ ಸಂಪನ್ಮೂಲದಿಂದ ಭರಿಸಲಾಗುತ್ತಿದೆ.<br><br>ಈ ಘಟಕಗಳ ಮುಂದಿನ ವರ್ಷಗಳ ನಿರ್ವಹಣೆ ಕುರಿತು ದಿನಾಂಕ:18.07.2022 ರಂದು ಸರ್ಕಾರದಿಂದ ಹೊರಡಿಸಲಾದ ಸುತ್ತೋಲೆಯಲ್ಲಿ ವಿವರವಾಗಿ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ, ಸುತ್ತೋಲೆಯನ್ನು ಅನುಬಂಧ-2 ರಲ್ಲಿ ನೀಡಿದೆ. |

ಸಂಖ್ಯೆ: ಗ್ರಾಅಪ 314 ಗ್ರಾಪಂಅ 2026

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್
ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ

ಅನುಬಂಧ - 1

Solid Waste Management

| SL.NO. | DISTRICT | Existing Permanent Old Buildings in GPs as SWM Shed | No. of GPs has constructed New SWM Shed | Total no. of Sheds available in GPs (New sheds + Permanent Old buildings) | No. of GPs has Permanent Cluster with SWM Unit (Note: while enter the No. don't add the mother GP) | ULB No. of GPs has Permanent Cluster with SWM Unit (Note: while enter the No. don't add the mother GP) | Total GPs has permanent structure |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| 1 | BENGALURU URBAN | 0 | 43 | 43 | 0 | 0 | 43 |
| 2 | CHAMARAJANAGARA | 87 | 43 | 130 | 0 | 0 | 130 |
| 3 | CHIKKABALLAPURA | 0 | 48 | 48 | 109 | 0 | 157 |
| 4 | BALLARI | 3 | 59 | 62 | 0 | 0 | 62 |
| 5 | YADGIRI | 1 | 64 | 65 | 7 | 0 | 72 |
| 6 | BIDAR | 0 | 69 | 69 | 8 | 0 | 77 |
| 7 | KOPPALA | 30 | 48 | 78 | 3 | 0 | 81 |
| 8 | RAICHURU | 1 | 78 | 79 | 100 | 0 | 179 |
| 9 | VIJAYANAGARA | 1 | 83 | 84 | 7 | 0 | 91 |
| 10 | BENGALURU RURAL | 0 | 86 | 86 | 0 | 0 | 86 |
| 11 | KOLAR | 63 | 91 | 154 | 0 | 0 | 154 |
| 12 | GADAG | 28 | 94 | 122 | 0 | 0 | 122 |
| 13 | KODAGU | 6 | 96 | 102 | 1 | 0 | 103 |
| 14 | RAMANAGARA | 65 | 42 | 107 | 0 | 0 | 107 |
| 15 | BAGALKOTA | 27 | 90 | 117 | 33 | 15 | 165 |
| 16 | UDUPI | 42 | 84 | 126 | 29 | 0 | 155 |
| 17 | KALBURGI | 4 | 122 | 126 | 0 | 0 | 126 |
| 18 | DHARWADA | 4 | 126 | 130 | 0 | 0 | 130 |
| 19 | DAVANGERE | 0 | 155 | 155 | 9 | 0 | 164 |
| 20 | CHITRADURGA | 43 | 108 | 151 | 2 | 0 | 153 |
| 21 | VIJAYAPURA | 0 | 115 | 115 | 11 | 0 | 126 |
| 22 | HAVERI | 19 | 155 | 174 | 38 | 0 | 212 |
| 23 | MYSURU | 98 | 82 | 180 | 49 | 0 | 229 |
| 24 | CHIKKAMAGALURU | 98 | 85 | 183 | 28 | 0 | 211 |
| 25 | UTTARA KANNADA | 29 | 159 | 188 | 29 | 0 | 217 |
| 26 | MANDYA | 80 | 126 | 206 | 9 | 0 | 215 |
| 27 | DAKSHINA KANNADA | 39 | 175 | 214 | 5 | 0 | 219 |
| 28 | SHIVAMOGGA | 44 | 196 | 240 | 22 | 0 | 262 |
| 29 | HASANA | 100 | 149 | 249 | 15 | 0 | 264 |
| 30 | TUMKURU | 0 | 256 | [illegible] | 32 | 0 | 288 |
| 31 | BELAGAVI | 136 | 202 | [illegible] | 127 | 11 | 476 |
| [illegible] | | [illegible] | [illegible] | [illegible] | [illegible] | [illegible] | [illegible] |

ಅನುಬಂಧ-2

ಕರ್ನಾಟಕ ಸರ್ಕಾರ
ಪಂಚಾಯತ್ ರಾಜ್ ಆಯುಕ್ತಾಲಯ
ಕಾಳಿದಾಸ ರಸ್ತೆ, ಗಾಂಧಿನಗರ ಬೆಂಗಳೂರು – 560 009.

ಸಂಖ್ಯೆ:ಕಪಂರಾಆ/ಅಭಿವೃದ್ಧಿ/3/2022 ದಿನಾಂಕ: 8-4-2022

# ಸುತ್ತೋಲೆ

**********

**ವಿಷಯ:** ಗ್ರಾಮ ಪಂಚಾಯತಿಗಳಲ್ಲಿ, ಸಂಜೀವಿನಿ ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟ (ಜಿಪಿಎಲ್‌ಎಫ್-GPLF) ಮಹಿಳಾ ಸ್ವಸಹಾಯ ಸಂಘಗಳು ಘನ ತ್ಯಾಜ್ಯ ನಿರ್ವಹಣೆಯ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳಲು ಮಾರ್ಗಸೂಚಿಗಳು.

**ಉಲ್ಲೇಖ:**
1. ಸರ್ಕಾರದ ಆದೇಶ ಸಂಖ್ಯೆ: ಕಪಂರಾಆ/ಅಭಿವೃದ್ಧಿ/180/2020-21, ದಿನಾಂಕ: 29.01.2021.
2. ಸರ್ಕಾರದ ಆದೇಶ ಸಂಖ್ಯೆ: RDWS&SD /126/ SBM/ Proj.M/ 2019, Date: 14.10.2019.
3. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪಂರಾ541ಜಿಪಸ, ದಿನಾಂಕ: 19.11.2020.
4. ಅಭಿಯಾನ ನಿರ್ದೇಶಕರು: ಎಸ್‌ಆರ್‌ಎಲ್‌ಪಿಎಸ್/ಎಲ್‌ಡಬ್ಲ್ಯೂ/ಎಲ್‌ಹೆಚ್-ಎನ್‌ಎಫ್/16/2020-21, ದಿನಾಂಕ: 09.06.2021.
5. ಕರ್ನಾಟಕ ರಾಜ್ಯ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ರೂಪಿಸಿರುವ ನೈರ್ಮಲ್ಯ ನೀತಿ ಕಾರ್ಯತಂತ್ರ ಮತ್ತು ಮಾದರಿ ಉಪವಿಧಿಗಳು

**ಪ್ರಸ್ತಾವನೆ:**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸ್ವಚ್ಛ ಭಾರತ್ ಮಿಷನ್ (ಗ್ರಾಮೀಣ) ಯೋಜನೆಯು ನೀರು, ನೈರ್ಮಲ್ಯ ಮತ್ತು ಸ್ವಚ್ಛತೆ ಅಂಶಗಳೊಂದಿಗೆ ವಿಸ್ತೃತ ಸ್ವರೂಪವನ್ನು ಹೊಂದಿದ್ದು, ಪ್ರಸ್ತುತ ರಾಜ್ಯವನ್ನು ಸ್ವಚ್ಛ ಸುಂದರವನ್ನಾಗಿಸುವ ವಿಶಾಲ ದೃಷ್ಟಿಕೋನವನ್ನು ಸಾಧಿಸಲು ರಾಜ್ಯದ ಎಲ್ಲಾ ಗ್ರಾಮೀಣ ಪಂಚಾಯತಿಗಳಲ್ಲಿ ಘನ ತ್ಯಾಜ್ಯವನ್ನು ವ್ಯವಸ್ಥಿತವಾಗಿ ನಿರ್ವಹಣೆ ಮಾಡಬೇಕಾದ ಅಗತ್ಯತೆಯ ಹಿನ್ನೆಲೆಯಲ್ಲಿ ಪ್ರಸ್ತುತವಾಗಿ ಸಂಜೀವಿನಿ ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟಗಳು ಗ್ರಾಮ ಪಂಚಾಯತ್ ಜೊತೆ ಘನ ತ್ಯಾಜ್ಯ ವಿಲೇವಾರಿ ನಿರ್ವಹಣೆಗೆ **ಉಲ್ಲೇಖ 1 ರಂತೆ** ಒಪ್ಪಂದಗಳನ್ನು ಮಾಡಿಕೊಂಡು ಪ್ರಾರಂಭದಿಂದ ಕೊನೆಯ ಹಂತದವರೆಗೂ ಘನ ತ್ಯಾಜ್ಯ ಸಂಗ್ರಹಣೆ, ಸಾಗಾಣಿಕೆ, ನಿರ್ವಹಣೆ ಮತ್ತು ವಿಲೇವಾರಿ, ವಾಹನ ಚಾಲನೆ/ನಿರ್ವಹಣೆಯಲ್ಲಿ ತೊಡಗಿಸಿಕೊಂಡಿರುತ್ತಾರೆ.

ಮುಂದುವರೆದು ಕರ್ನಾಟಕ ರಾಜ್ಯ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ರೂಪಿಸಿರುವ ನೈರ್ಮಲ್ಯ ನೀತಿ ಮತ್ತು ಕಾರ್ಯತಂತ್ರದ ಮಾರ್ಗಸೂಚಿಯನ್ನು ಆಧರಿಸಿ ಈ ಕೆಳಕಂಡ ಪರಿಷ್ಕೃತ ಮಾರ್ಗಸೂಚಿಯನ್ನು ಹೊರಡಿಸಲಾಗಿದೆ.

**1. ಮೂಲದಲ್ಲಿಯೇ ಮೊದಲ ಹಂತದ ಘನ ತ್ಯಾಜ್ಯ ವಿಂಗಡಣೆ**

ಘನತ್ಯಾಜ್ಯ ನಿರ್ವಹಣಾ ಯೋಜನೆಯಲ್ಲಿ ಘನ ತ್ಯಾಜ್ಯವನ್ನು ಮೂಲದಲ್ಲಿಯೇ (ಮನೆಗಳು/ ವಾಣಿಜ್ಯ ಸಂಸ್ಥೆಗಳು ಇತರೆ) 3 ರೀತಿಗಳಲ್ಲಿ (**ಹಸಿ ತ್ಯಾಜ್ಯಗಳು, ಒಣ ತ್ಯಾಜ್ಯಗಳು ಮತ್ತು ಅಪಾಯಕಾರಿ ತ್ಯಾಜ್ಯ**) ವಿಂಗಡಿಸುವುದು ಅತ್ಯಂತ ಮುಖ್ಯವಾದ ಕ್ರಮವಾಗಿರುತ್ತದೆ. ವಿಸ್ತೃತ ವಿವರಣಾತ್ಮಕ ಪಟ್ಟಿಯನ್ನು **ಅನುಬಂಧ**-1ರಲ್ಲಿ ನೀಡಿದೆ.

ಮೂಲದಲ್ಲಿಯೇ ತ್ಯಾಜ್ಯವನ್ನು ವಿಂಗಡಣೆ ಮಾಡಲು ಮಾಹಿತಿ, ಶಿಕ್ಷಣ ಮತ್ತು ಸಂವಹನ ಚಟುವಟಿಕೆಗಳನ್ನು ಗ್ರಾ.ಪಂ. ವ್ಯಾಪ್ತಿಯಲ್ಲಿ ಹಮ್ಮಿಕೊಳ್ಳುವುದು.

ತ್ಯಾಜ್ಯ ವಿಂಗಡಣೆಯ ವಿಧಾನಗಳ ಬಗ್ಗೆ ಸಂಜೀವಿನಿ ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟದ ಸದಸ್ಯರು ಗ್ರಾಮದ ಜನರಿಗೆ ಜಾಗೃತಿ ಮೂಡಿಸುವ ಬಗ್ಗೆ ಕ್ರಮ ಕೈಗೊಳ್ಳುವುದು

2. **ದ್ವಿತೀಯ ಹಂತದ ವಿಂಗಡಣೆಗಾಗಿ ತ್ಯಾಜ್ಯ ಸಂಗ್ರಹಣೆ ಮತ್ತು ಸಾಗಾಣಿಕೆಗಾಗಿ ಮಾನವ ಸಂಪನ್ಮೂಲ ಮತ್ತು ವಾಹನಗಳು**

ಮೂಲದಲ್ಲಿಯೇ ತ್ಯಾಜ್ಯ ಸಂಗ್ರಹಣೆಗಾಗಿ ಗ್ರಾಮ ಪಂಚಾಯತ್ ಮತ್ತು ಸಂಜೀವಿನಿ ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟಗಳು **ಅನುಬಂಧ-2**ರಂತೆ ಕಾರ್ಯನಿರ್ವಹಿಸುವುದು.

ಸಮುದಾಯ ಸಂಪನ್ಮೂಲ ವ್ಯಕ್ತಿಗಳು (community cadres such as Master Bookkeepers (MBKs) and Local Community Resource Persons (LCRPs)) ಹಾಗೂ ಇತರೆ ಸಖಿಗಳು, ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟದ ಹಾಗು ಇತರ ಕೆಲಸಗಳಿಂದ ಆದಾಯವಿರುವುದರಿಂದ, ಸ್ವಚ್ಛತೆ ನಿರ್ವಹಣಾ ಕೆಲಸದಲ್ಲಿ ತೊಡಗಿಸಿಕೊಳ್ಳಬಾರದು. ಆಸಕ್ತಿಯಿರುವ ಸಂಜೀವಿನಿ ಸ್ವಸಹಾಯ ಗುಂಪಿನ ಇತರ ಸದಸ್ಯರು ಮಾತ್ರ ಘನ ತ್ಯಾಜ್ಯ ನಿರ್ವಹಣಾ ಘಟಕದ ಕೆಲಸವನ್ನು ತೆಗೆದುಕೊಳ್ಳಬಹುದು.

ಗ್ರಾಮ ಪಂಚಾಯತ್‌ಗಳು ಸಂಜೀವಿನಿ ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟಗಳಿಗೆ ವಾಹನಗಳನ್ನು ಬಾಡಿಗೆಗೆ ಒದಗಿಸುವುದು ಬಾಡಿಗೆಯ ಮಾದರಿ ಒಪ್ಪಂದ ಪತ್ರ ಮತ್ತು ರಶೀದಿಯನ್ನು ಅನುಬಂಧ-3 ರಲ್ಲಿ ನೀಡಲಾಗಿದೆ

**ಚಾಲನಾ ತರಬೇತಿ ಪಡೆದ ಜಿಪಿಎಲ್‌ಎಫ್ ಮಹಿಳೆಯರನ್ನು ಸ್ವಚ್ಛತಾ ವಾಹಿನಿ** ಚಾಲನೆಗೆ ತೊಡಗಿಸಿಕೊಳ್ಳುವುದು. ಅಂತಹ ತರಬೇತಿಯನ್ನು ಪಡೆದಿರದ ಮಹಿಳೆಯರಿಗೆ 6 ತಿಂಗಳ ಕಾಲಾವಕಾಶವನ್ನು ನೀಡಬೇಕಾಗುತ್ತದೆ. ಇದರಿಂದ ಅವರು ತರಬೇತಿಯನ್ನು ಪೂರ್ಣಗೊಳಿಸಬಹುದು.

3. ಘನ ತ್ಯಾಜ್ಯ ನಿರ್ವಹಣೆಗಾಗಿ ಮೇಲುಸ್ತುವಾರಿ ಸಮಿತಿ

**ಸಂಜೀವಿನಿ ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟದ ಪರವಾಗಿ ಘನ ತ್ಯಾಜ್ಯ ನಿರ್ವಹಣೆಯಲ್ಲಿ ತೊಡಗಿರುವ ಸದಸ್ಯರು, ಗ್ರಾಮ ಪಂಚಾಯತ್ ಅಧಿಕಾರಿಗಳು ಮತ್ತು ಸ್ವಚ್ಛ ಭಾರತ ಅಭಿಯಾನ(ಗ್ರಾಮೀಣ)ದ ಜಿಲ್ಲಾ ಮಟ್ಟದ ಸಂಯೋಜಕರು ಹಾಗೂ ಸಂಜೀವಿನಿ ಜಿಲ್ಲಾ/ತಾಲ್ಲೂಕು ಮಟ್ಟದ ಸಿಬ್ಬಂದಿಯ ಮಾರ್ಗದರ್ಶನ ಮತ್ತು ಸಹಯೋಗದೊಂದಿಗೆ, ಗ್ರಾ.ಪಂ.ಯ ವ್ಯಾಪ್ತಿಯಲ್ಲಿಯ ಮನೆಗಳು, ವಾಣಿಜ್ಯ ಮಳಿಗೆಗಳು ಹಾಗೂ ಇತರ ಮೂಲಗಳಿಂದ ಶೇ. 100% ರಷ್ಟು ತ್ಯಾಜ್ಯ ಸಂಗ್ರಹಣೆಗಾಗಿ ಮಾರ್ಗನಕ್ಷೆ** ತಯಾರಿಸಿ, ಇಂಧನ ಬಳಕೆಯನ್ನು ಗಮನದಲ್ಲಿಟ್ಟುಕೊಂಡು ಘನ ತ್ಯಾಜ್ಯ ಸಾಗಾಣಿಕೆಗಾಗಿ ವಾಹನ ನಿಯೋಜನೆ, (ಆಟೋ, ತಳ್ಳುವ ಗಾಡಿ, ಮೂರು ಚಕ್ರದ ಸೈಕಲ್ ಗಳನ್ನು ಬಳಸಿಕೊಂಡು) ಹಾಗೂ ತ್ಯಾಜ್ಯ ಸಂಗ್ರಹಣಾ ದಿನಗಳನ್ನು ನಿರ್ಧರಿಸುವುದು

ಗ್ರಾಮ ಪಂಚಾಯತ್‌ನಲ್ಲಿನ ಘನ ತ್ಯಾಜ್ಯ ನಿರ್ವಹಣೆ ಚಟುವಟಿಕೆಗಳನ್ನು ಪರಿಶೀಲಿಸಲು ಗ್ರಾಮ ಪಂಚಾಯತ್ ಅಧ್ಯಕ್ಷರು, ಸಂಜೀವಿನಿ ಒಕ್ಕೂಟದ (GPLF) ಅಧ್ಯಕ್ಷರು, ಸಮುದಾಯ ಸಂಪನ್ಮೂಲ ವ್ಯಕ್ತಿಗಳು (community cadres such as Master Bookkeepers (MBKs) and Local Community Resource Persons (LCRPs)), ಸ್ವಚ್ಛ ಭಾರತ ಅಭಿಯಾನ(ಗ್ರಾಮೀಣ)ದ ಸಂಯೋಜಕರು, ಸಂಜೀವಿನಿ (NRLM) ಸಂಯೋಜಕರನ್ನು ಒಳಗೊಂಡ ಸಮಿತಿಯನ್ನು ರಚಿಸುವುದು.

## 4. ಘನ ತ್ಯಾಜ್ಯ ವಿಲೇವಾರಿ ಮತ್ತು ನಿರ್ವಹಣೆಗಾಗಿ ಗ್ರಾಮ ಪಂಚಾಯತ್ ಮತ್ತು ಸಂಜೀವಿನಿ ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟಗಳ ನಡುವೆ ಒಪ್ಪಂದ

ಗ್ರಾಮ ಪಂಚಾಯತ್ ಮತ್ತು ಸಂಜೀವಿನಿ ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟಗಳ ನಡುವಿನ ಮಾದರಿ ಒಪ್ಪಂದ ಪತ್ರವನ್ನು **ಅನುಬಂಧ-4** ರಲ್ಲಿ ನೀಡಿದೆ. ಈಗಾಗಲೇ ಒಪ್ಪಂದ ಮಾಡಿಕೊಂಡಿರುವ ಗ್ರಾಮ ಪಂಚಾಯತ್ ಮತ್ತು ಸಂಜೀವಿನಿ ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟಗಳು ನಂತರದ ವರ್ಷಗಳಲ್ಲಿ ನವೀಕರಣಕ್ಕೆ (renewal) **ಅನುಬಂಧ-4** ರಲ್ಲಿ ನೀಡಿರುವ ಮಾದರಿಯನ್ನು ಅಳವಡಿಸಿಕೊಳ್ಳುವುದು

ಕ್ರಮ ಸಂಖ್ಯೆ 3 ರಲ್ಲಿ ತಿಳಿಸಿರುವ ಸಮಿತಿಯು ಗ್ರಾಮ ಪಂಚಾಯತ್ ಮತ್ತು ಸಂಜೀವಿನಿ ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟಗಳ ನಡುವ ಒಪ್ಪಂದ/ಒಡಂಬಡಿಕೆಯಾದ ಮೊದಲ 3 ತಿಂಗಳ ಕಾಲ ತಿಂಗಳಿಗೊಂದು ಬಾರಿ ಹಾಗು ನಂತರ 3 ತಿಂಗಳಿಗೊಂದು ಬಾರಿ ಸಭೆ ನಡೆಸುವುದು.

## 5. ಬಳಕೆದಾರರ ಶುಲ್ಕ

**ಅನುಬಂಧ-5** ರಲ್ಲಿ ತ್ಯಾಜ್ಯ ಉತ್ಪಾದಕರಿಂದ ಮಾಹೆಯಾನ ಪಡೆಯಬಹುದಾದ ಬಳಕೆದಾರರ ಶುಲ್ಕವನ್ನು ವಿವರಿಸಿದೆ. ಪ್ರತಿ ವರ್ಷ ಬಳಕೆದಾರರ ಶುಲ್ಕವನ್ನು ವಾರ್ಷಿಕ ಕನಿಷ್ಠ 1 % ಹೆಚ್ಚಿಸುವುದು

ಗ್ರಾಮ ಪಂಚಾಯತಿಯು ಈ ಶುಲ್ಕವನ್ನು ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟಗಳ ಮೂಲಕ ಸಂಗ್ರಹಿಸಿ, ತ್ಯಾಜ್ಯ ನಿರ್ವಹಣೆಯ ಪ್ರಕ್ರಿಯೆಯಲ್ಲಿ ಬಳಸಲು ಒಕ್ಕೂಟಗಳಿಗೆ ನೀಡಲು ಸಾಮಾನ್ಯ ಸಭೆಯಲ್ಲಿ ಠರಾವುವನ್ನು ಮಂಡಿಸುವುದು.

**ಅನುಬಂಧ -6** ರಲ್ಲಿ ಶುಲ್ಕ ಸ್ವೀಕೃತಿ ರಶೀದಿಯ ಮಾದರಿಯನ್ನು ನೀಡಲಾಗಿದ

ಗ್ರಾಮ ಪಂಚಾಯತ್‌ನ ಸೇವಾ ವಿತರಣಾ ಘಟಕಗಳಿಂದ (ಅಂಗನವಾಡಿ, ಶಾಲೆ, ಗ್ರಂಥಾಲಯ, ಪ್ರಾಥಮಿಕ ಆರೋಗ್ಯ ಕೇಂದ್ರ (PHC/HWC), ಹಾಸ್ಟೆಲ್‌ಗಳು, ಪಶುವೈದ್ಯಕೀಯ ಚಿಕಿತ್ಸಾಲಯಗಳು) ಅಪಾಯಕಾರಿಯಲ್ಲದ ಒಣ ಘನ ತ್ಯಾಜ್ಯ ಗಳನ್ನು ಮಾತ್ರ ಸಂಗ್ರಹಿಸುವುದು ಮತ್ತು ಅವುಗಳ ಬಳಕೆದಾರರ ಶುಲ್ಕವನ್ನು ಗ್ರಾಮ ಪಂಚಾಯತಿಯು ಪಾವತಿಸುವುದು.

## 6. ಘನತ್ಯಾಜ್ಯ ವಿಲೇವಾರಿ ಘಟಕದಲ್ಲಿ ದ್ವಿತೀಯ ಹಂತದ ವೈಜ್ಞಾನಿಕ ವಿಂಗಡಣೆ

ಘನ ತ್ಯಾಜ್ಯ ನಿರ್ವಹಣೆಯಲ್ಲಿ ವಸ್ತುಗಳನ್ನು ವಿಂಗಡಿಸಬಹುದಾದ ಪ್ರಕಾರಗಳನ್ನು ಮತ್ತು ಮಾದರಿ ದರಪಟ್ಟಿಯನ್ನು (ಬೆಂಗಳೂರಿನ ಸುತ್ತ ಮುತ್ತ ಇರುವ ಪಂಚಾಯತಿಗಳಲ್ಲಿ ವಿಂಗಡಿಸಿದ ಘನ ತ್ಯಾಜ್ಯ ವಸ್ತುಗಳಿಗೆ ನೀಡುವ ಬೆಲೆಯ ದರಪಟ್ಟಿ) **ಅನುಬಂಧ-7ರಲ್ಲಿ** ನೀಡಲಾಗಿದೆ. ಮಾದರಿ ಪಟ್ಟಿಯನ್ನು ಆಧಾರವಾಗಿಟ್ಟುಕೊಂಡು ಒಕ್ಕೂಟದ ಸದಸ್ಯರು ಸ್ಥಳೀಯ ಬಿಕರಿದಾರರೊಂದಿಗೆ (vendors) ತ್ಯಾಜ್ಯ ವಸ್ತುಗಳ ದರವನ್ನು ವ್ಯವಹರಿಸುವುದು.

### 7. ಘನತ್ಯಾಜ್ಯ ನಿರ್ವಹಣಾ ಘಟಕದಲ್ಲಿ ನಿರ್ವಹಿಸಬೇಕಾಗಿರುವ ದಾಖಲೆಗಳು:

a. ಘನತ್ಯಾಜ್ಯ ನಿರ್ವಹಣೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಜೀವಿನಿ ಸದಸ್ಯರ ಹಾಜರಾತಿ ಪುಸ್ತಕ
b. ದಿನದ ವಿಂಗಡಿಸಿದ ತ್ಯಾಜ್ಯ ಸಂಪನ್ಮೂಲಗಳ ತೂಕದ ವಿವರ
c. ದಾಸ್ತಾನು ವಹಿ
d. ಮಾರಾಟ ವಹಿ
e. ನಗದು ಪುಸ್ತಕ
f. ಗೌರವ ಧನ ಪಾವತಿ ವಿವರ
g. ದಿನ ವಹಿ ವಸೂಲಾತಿ ಪುಸ್ತಕ
h. ಘನ ತ್ಯಾಜ್ಯ ನಿರ್ವಹಣೆಯ ಉಪಕರಣಗಳ ದಾಖಲು ವಹಿ
i. ಬಳಕೆದಾರರ ಶುಲ್ಕ ಪಾವತಿ ರಶೀದಿ
j. ಸಂಜೀವಿನಿ ಸದಸ್ಯರ ಆರೋಗ್ಯ ತಪಾಸಣಾ ಚೀಟಿ

ಮೇಲೆ ತಿಳಿಸಿರುವ ದಾಖಲಾತಿಗಳ ನಮೂನೆಗಳನ್ನು **ಅನುಬಂಧ-8** ರಲ್ಲಿ ನೀಡಲಾಗಿದೆ

### 8. ಹಸಿ ತ್ಯಾಜ್ಯ ನಿರ್ವಹಣೆ

ವಿವಿಧ ಮೂಲಗಳಿಂದ ಉತ್ಪನ್ನವಾಗುವ ಹಸಿ/ಸಾವಯವ ತ್ಯಾಜ್ಯ ನಿರ್ವಹಣೆಗೆ **ಅನುಬಂಧ-9 ಅನ್ನು** ಉಲ್ಲೇಖಿಸಬಹುದು

ಸಂಗ್ರಹಣೆಯಾದ ಹಸಿ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಂಗಡಿಸಿ ಉಪಯುಕ್ತವಾಗುವಂತೆ ಗೊಬ್ಬರ ತಯಾರಿಸುವುದು. ಅಂಗನವಾಡಿ ಮತ್ತು ಶಾಲೆಗಳಲ್ಲಿ ಪೈಪ್ ಕಾಂಪೋಸ್ಟಿಂಗ್ ವಿಧಾನವನ್ನು ಅಳವಡಿಸಿಕೊಳ್ಳಲು ಗ್ರಾಮ ಪಂಚಾಯತಿಯು ಕಾರ್ಯಪ್ರವೃತ್ತಿಯಾಗುವುದು. ಮಾರುಕಟ್ಟೆಯ ಹಸಿ ತ್ಯಾಜ್ಯವನ್ನು NADEP ವಿಧಾನವನ್ನು ಉಪಯೋಗಿಸಿ ಗೊಬ್ಬರ ತಯಾರಿಸುವುದು. NADEP ವಿಧಾನವನ್ನು ಬಳಸಲು ನಿರ್ಮಿಸಬೇಕಾಗುವ ತೊಟ್ಟಿಯನ್ನು ನರೇಗಾ ಯೋಜನೆಯಡಿಯಲ್ಲಿ ನಿರ್ಮಿಸಬಹುದು ಹಾಗೂ ಇತರೆ ಸಾವಯವ ತ್ಯಾಜ್ಯ ನಿರ್ವಹಣೆಯ ವಿಧಾನಗಳ ಮಾಹಿತಿಯನ್ನು **ಅನುಬಂಧ-9ರಲ್ಲಿ** ನೀಡಲಾಗಿದೆ.

### 9. ದಂಡನೆಗಳು

ತ್ಯಾಜ್ಯ ನಿರ್ವಹಣೆಯಲ್ಲಿ ಸ್ವಚ್ಛ ಭಾರತ ಅಭಿಯಾನ (ಗ್ರಾಮೀಣ) ಮತ್ತು ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಹಾಗೂ ಇತರೆ ಇಲಾಖೆಗಳ ನಿಯಮಗಳ ಉಲಂಘನೆಯಾದರೆ ಗ್ರಾಮ ಪಂಚಾಯತಿಯು ದಂಡನೆಗಳನ್ನು ವಿಧಿಸಬೇಕು. ದಂಡನೆಗಳಿಂದ ಸಂಗ್ರಹವಾದ ಹಣವನ್ನು ತ್ಯಾಜ್ಯ ನಿರ್ವಹಿಸುತ್ತಿರುವ ಸಂಜೀವಿನಿ ಗ್ರಾಮ ಪಂಚಾಯತಿ ಒಕ್ಕೂಟಕ್ಕೆ ನೀಡುವುದು ಶಿಫಾರಸ್ಸು ಮಾಡಲಾದ ದಂಡನೆಗಳ ವಿವರಗಳನ್ನು **ಅನುಬಂಧ-10 ರಲ್ಲಿ** ನೀಡಲಾಗಿದೆ.

### 10. ಒಕ್ಕೂಟಗಳ ಆರ್ಥಿಕ ಸುಸ್ಥಿರತೆಗಾಗಿ ತೆಗೆದುಕೊಳ್ಳಬಹುದಾದ ಕ್ರಮಗಳು

**ಅನುಬಂಧ-2** ರಲ್ಲಿ ನೀಡಿರುವ ಮಾದರಿಯ ಪ್ರಕಾರ ದ್ವಿತೀಯ ಹಂತದ ವಿಂಗಡಣೆಗಾಗಿ ತ್ಯಾಜ್ಯ ಸಂಗ್ರಹಣೆ ಮತ್ತು ಸಾಗಾಣಿಕೆಗಾಗಿ ಮಾನವ ಸಂಪನ್ಮೂಲ ಮತ್ತು ವಾಹನಗಳನ್ನು ಅಗತ್ಯಕ್ಕೆ ಅನುಗುಣವಾಗಿ ಮಾತ್ರ ತೆಗೆದುಕೊಳ್ಳುವುದು ಹಾಗೂ ಬಳಸುವುದು. ಘನ ತ್ಯಾಜ್ಯ ನಿರ್ವಹಣೆಯ ಕೆಲಸದಲ್ಲಿ ತೊಡಗಿರುವ ಪ್ರತಿಯೋರ್ವ ಸಂಜೀವಿನಿ ಸ್ವಸಹಾಯ

ಗುಂಪಿನ ಸದಸ್ಯ ಅಥವಾ ಗ್ರಾಮ ಪಂಚಾಯತಿ ಒಕ್ಕೂಟದ ಸದಸ್ಯೆಗೆ ಮಾಹೆಯಾನ **ಕನಿಷ್ಠ 5,000 ಮತ್ತು ಗರಿಷ್ಠ 7,500 ರೂ. ಗಳಷ್ಟು ಗೌರವಧನ** ನೀಡುವುದು. (ಒಂದು ವೇಳೆ ಗ್ರಾ.ಪಂ. ಯಲ್ಲಿ ಹೆಚ್ಚು ಗೌರವಧನ ನೀಡಲು ಸಾಮರ್ಥ ವಿದ್ದರೆ ಅಂತಹ ಗ್ರಾ.ಪಂ.ಗಳು ಹೆಚ್ಚು ಗೌರವಧನ ನೀಡಬಹುದು)

ತ್ಯಾಜ್ಯ ನಿರ್ವಹಣೆಯಲ್ಲಿ ಬಳಕೆದಾರರ ಶುಲ್ಕ, ದಂಡನೆಗಳು ಮತ್ತು ತ್ಯಾಜ್ಯಗಳ / ಸಾವಯವ ಗೊಬ್ಬರದ ಮಾರಾಟದಿಂದ ಬರುವ ಆದಾಯ ಹಾಗೂ ನಿರ್ವಹಣೆಯಲ್ಲಿ ಆಗುವ ವೆಚ್ಚಗಳ ಮಾದರಿಯನ್ನು ಮಾಹಿತಿಗಾಗಿ **ಅನುಬಂಧ-11** ರಲ್ಲಿ ನೀಡಲಾಗಿದೆ. ಈ ಮಾದರಿಯನ್ನು ಅನುಸರಿಸಿ ಗ್ರಾಮ ಪಂಚಾಯತಿಗೆ ಅನುಗುಣವಾಗಿ ತ್ಯಾಜ್ಯ ನಿರ್ವಹಣೆಯಲ್ಲಿ ಆರ್ಥಿಕ ಸುಸ್ಥಿರತೆಯನ್ನು ಸಾಧಿಸಲು ಗ್ರಾಮ ಪಂಚಾಯತಿ ಹಾಗೂ ಸಂಜೀವಿನಿ ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟಗಳು ಜೊತೆಯಾಗಿ ಕಾರ್ಯನಿರ್ವಹಿಸುವುದು.

**11. ಘನ ತ್ಯಾಜ್ಯ ನಿರ್ವಹಣೆಯಿಂದ ಇತರೆ ಆರ್ಥಿಕ ಚಟುವಟಿಕೆಗಳಿಗೆ ಉತ್ತೇಜನ**

ಸಂಜೀವಿನಿ ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟ ಎಂಬುವುದು ಒಂದು ಕಿರು ಉದ್ಯಮವಾಗಿ ರೂಪುಗೊಳ್ಳಬೇಕು. ಪ್ರಸ್ತುತ ಕೆಲವು ಮಹಿಳೆಯರು ಮಾತ್ರ ಮನೆಮನೆಗೆ ಹೋಗಿ ತ್ಯಾಜ್ಯ ನಿರ್ವಹಣೆಯಲ್ಲಿ ಮತ್ತು ಸ್ವಚ್ಛತೆಯ ಕೆಲಸದಲ್ಲಿ ಕಸ ವಿಲೇವಾರಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದು, ಸಂಜೀವಿನಿ ಇನ್ನು ಹಲವಾರು ಬಡ ಮಹಿಳೆಯರ ಜೀವನೋಪಾಯಕ್ಕಾಗಿ ಹಲವು ಬಗೆಯ ಆರ್ಥಿಕ ಚಟುವಟಿಕೆಗಳನ್ನು ಸ್ವಚ್ಛ ಸಂಕೀರ್ಣದ ಜಾಗದಲ್ಲಿ / ತ್ಯಾಜ್ಯ ನಿರ್ವಹಣಾ ಘಟಕಗಳಲ್ಲಿ ಕೈಗೊಳ್ಳಬಹುದು.

ತ್ಯಾಜ್ಯ ವಸ್ತುಗಳನ್ನು ಬಳಸಿ ಉಪ ಉತ್ಪನ್ನಗಳನ್ನು ತಯಾರಿಸುವ ಅಥವಾ ತ್ಯಾಜ್ಯ ವಸ್ತುಗಳನ್ನು ಹೆಚ್ಚು ಸಂಸ್ಕರಿಸದೇ ಹಾಗೆಯೇ ಬಳಸಿ ಆದಾಯಗಳಿಸುವ ಚಟುವಟಿಕೆಗಳನ್ನು ಕೈಗೊಳ್ಳಬಹುದು. ಉದಾ: ಹೂವಿನ ತ್ಯಾಜ್ಯದಿಂದ ಅಗರಬತ್ತಿಯನ್ನು ತಯಾರಿಸುವುದು, ಹಸಿ ತ್ಯಾಜ್ಯವನ್ನು ಬಳಸಿ ಹಂದಿ ಸಾಕಾಣಿಕೆ, ಕೋಳಿ ಸಾಕಾಣಿಕೆ, ಪೌಷ್ಠಿಕ ಕೈತೋಟ, ಔಷಧಿ ಗಿಡಗಳ ಕೈತೋಟ, ಪೇಪರ್ ಮರು ಬಳಕೆಯಿಂದ ಫೈಲುಗಳು, ಪ್ಲಾಸ್ಟಿಕ್ ವಸ್ತುಗಳಿಂದ ಮಾಡಬಹುದಾದ ಮರುಬಳಕೆಯ ವಸ್ತುಗಳು ಇತ್ಯಾದಿ.

ಸ್ವಸಹಾಯ ಗುಂಪಿನ ಮಹಿಳೆಯರು ಸ್ಟೀಲ್ ಪಾತ್ರೆಗಳು ಹಾಗೂ ತಟ್ಟೆ, ಲೋಟಗಳನ್ನು ಬಳಸಲು ಹಾಗೂ ಅಗತ್ಯವಿರುವ ಕಾರ್ಯಕ್ರಮಗಳಿಗೆ ಬಾಡಿಗೆ ನೀಡಲು ಉತ್ತೇಜನ ನೀಡುವುದು.

ಎಲ್ಲಾ ಚಟುವಟಿಕೆಗಳಿಂದ ಬರುವ ಆದಾಯವನ್ನು ಒಕ್ಕೂಟಗಳು ಸಂಗ್ರಹಿಸಿ ಚಟುವಟಿಕೆಯಲ್ಲಿ ಕಾರ್ಯನಿರ್ವಹಿಸಿದ ಮಹಿಳೆಯರಿಗೆ ಹಂಚುವುದು (ಸಂಜೀವಿನಿ ಒಕ್ಕೂಟದ ಸದಸ್ಯರು ಒಕ್ಕೂಟವನ್ನು ಒಂದು ಉದ್ಯಮವಾಗಿ ಮತ್ತು ಅವರನ್ನು ಉದ್ಯಮದ ಮಾಲೀಕರು ಎನ್ನುವ ಮನಸ್ಥಿತಿಯನ್ನು ಹೊಂದಲು ತರಬೇತಿಯನ್ನು ಸಂಜೀವಿನಿ ಸಂಸ್ಥೆಯ ವತಿಯಿಂದ ನೀಡುವುದು). ಸಂಜೀವಿನಿಯ ರಾಜ್ಯ ಮತ್ತು ಜಿಲ್ಲಾ ತಂಡಗಳು ಇಲ್ಲಿ ತಯಾರಾಗುವ ವಸ್ತುಗಳಿಗೆ ಮಾರುಕಟ್ಟೆ ಸೌಲಭ್ಯವನ್ನು ಒದಗಿಸುವುದು.

ಪ್ರತಿ ಆರ್ಥಿಕ ವರ್ಷ ಪ್ರಾರಂಭವಾಗುವ ಮೊದಲು ಘನ ತ್ಯಾಜ್ಯ ನಿರ್ವಹಣೆಗೆ (ವೇತನ, ಇಂಧನ, ಇತರೆ ವೆಚ್ಚಗಳು) ಕ್ರಿಯಾ ಯೋಜನೆ ಮತ್ತು ಬಜೆಟ್ ಅನ್ನು ತಯಾರಿಸಿ, ಗ್ರಾಮ ಪಂಚಾಯತ್‌ಗಳಿಗೆ ಸಲ್ಲಿಸಿ, ಬಳಕೆದಾರರ ಶುಲ್ಕ, ಮರುಬಳಕೆ ಮಾಡಬಹುದಾದ ಅಥವಾ ಗೊಬ್ಬರ ಮಾರಾಟದಿಂದ ಮತ್ತು ವಿಧಿಸುವ ದಂಡಗಳಿಂದ ಬರುವ ಆದಾಯದ ಅಂದಾಜಿನ ಆಧಾರದ ಮೇಲೆ, ಜಿಪಿಎಲ್‌ಎಫ್‌ಗಳಿಗೆ ಉಳಿದ ಮೊತ್ತವನ್ನು ಪಾವತಿಸಲು ಗ್ರಾಮ ಪಂಚಾಯಿತಿ ಹಣವನ್ನು ನಿಯೋಜಿಸಬಹುದು. ಕೆಲವು ವರ್ಷಗಳಲ್ಲಿ, ಜಿಪಿಎಲ್‌ಎಫ್‌ಗಳು ಗ್ರಾಮ

ಪಂಚಾಯಿತಿಗಳಿಂದ ಕನಿಷ್ಠ ಹಣಕಾಸಿನ ಬೆಂಬಲದೊಂದಿಗೆ ತಮ್ಮನ್ನು ತಾವು ನಿರ್ವಹಿಸಲು ಸ್ವಯಂ ಸಮರ್ಥರಾಗುವ ಗುರಿಯನ್ನು ಹೊಂದುವುದು. ಕ್ರಿಯಾ ಯೋಜನೆ ಮಾದರಿಯನ್ನು **ಅನುಬಂಧ -12** ರಲ್ಲಿ ನೀಡಲಾಗಿದೆ

**ಈ ಮೇಲೆ ತಿಳಿಸಿರುವ ಎಲ್ಲಾ ನಿಯಮಗಳನ್ನು ಪಾಲಿಸುವುದರ ಜೊತೆಗೆ ಕೆಳಕಂಡ ನಿರ್ದೇಶನಗಳನ್ನು ತಪ್ಪದೇ ಪಾಲಿಸುವುದು**

- ಗ್ರಾಮ ಪಂಚಾಯಿತಿಗಳು ಪ್ರತಿ ವಾರ್ಡ್ ಸಭೆ, ಗ್ರಾಮ ಸಭೆಗಳಲ್ಲಿ ತ್ಯಾಜ್ಯ ನಿರ್ವಹಣೆಯ ಕುರಿತು ಕಡ್ಡಾಯವಾಗಿ ಚರ್ಚಿಸುವುದು. ಸದರಿ ಸಭೆಗಳಲ್ಲಿ ತ್ಯಾಜ್ಯ ನಿರ್ವಹಣೆಯಲ್ಲಿ ತೊಡಗಿರುವ ಒಕ್ಕೂಟಗಳ ಸದಸ್ಯರು ಭಾಗವಹಿಸುವಂತೆ ಕ್ರಮ ವಹಿಸುವುದು ಮತ್ತು ಸಭಾ ಠರಾವಿನಲ್ಲಿ ನಮೂದಿಸುವುದು.
- ಗ್ರಾಮ ಪಂಚಾಯಿತಿ **ಸದಸ್ಯರು ತಮ್ಮ ಕಾರ್ಯಕ್ಷೇತ್ರದಲ್ಲಿ** ತ್ಯಾಜ್ಯ ನಿರ್ವಹಣೆಯಲ್ಲಿ ಅರಿವು ಮೂಡಿಸಿ **ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿದ್ದಲ್ಲಿ** ಅಂತಹ ಸದಸ್ಯರ ಸಾಧನೆಯನ್ನು ಗುರುತಿಸಿ ಗ್ರಾಮ ಸಭೆಗಳಲ್ಲಿ ಪುರಸ್ಕರಿಸಲು ಗ್ರಾಮ ಪಂಚಾಯಿತಿಗಳು ಕ್ರಮ ವಹಿಸುವುದು.
- ಗ್ರಾಮ ಪಂಚಾಯತಿಗಳು ಜನರಲ್ಲಿ ತ್ಯಾಜ್ಯ ನಿರ್ವಹಣೆ ಕುರಿತು ಅರಿವು ಮೂಡಿಸಲು ಆರ್ಥಿಕವಾಗಿ ಹಿಂದುಳಿದವರಿಂದ ಅಪಾಯಕಾರಿಯಲ್ಲದ ಪ್ಲಾಸ್ಟಿಕ್ ತ್ಯಾಜ್ಯಗಳನ್ನು ಘನ ತ್ಯಾಜ್ಯ ನಿರ್ವಹಣಾ ಘಟಕಕ್ಕೆ ಶೇಖರಿಸಿ ನೀಡಿದಲ್ಲಿ ಪ್ರಾರಂಭದಲಿ ಉತ್ತೇಜನ ನೀಡಲು ಪ್ರತೀ ಕೆ.ಜಿ. ಪ್ಲಾಸ್ಟಿಕ್‌ಗೆ ರೂ.5/- ರಂತೆ ಹಾಗೂ ಮುಂದಿನ ದಿನಗಳಲ್ಲಿ ರೂ.2/- ರಂತೆ ಪಾವತಿಸಬಹುದು, ಈ ಕುರಿತು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಹೆಚ್ಚಿನ ಪ್ರಚಾರ ನೀಡುವುದು.
- ಅಂಗನವಾಡಿ ಹಾಗೂ ಶಾಲಾ ಮಕ್ಕಳಿಗೆ ತ್ಯಾಜ್ಯ ವಿಂಗಡನೆಯ ಮನೋಭಾವವನ್ನು ಬಲಪಡಿಸಲು ಹತ್ತಿರದ ತ್ಯಾಜ್ಯ ನಿರ್ವಹಣಾ ಘಟಕಗಳಿಗೆ ಭೇಟಿ ಮಾಡಿಸುವುದು
- ಗ್ರಾಮ ಪಂಚಾಯತಿಗಳು ಸ್ವಚ್ಛತೆ ಕಾಪಾಡಲು ಮತ್ತು ದೀರ್ಘಾವಧಿಯಿಂದ ಯಾವುದೇ ಸ್ಥಳದಲ್ಲಿ ಸಂಗ್ರಹವಾಗಿರುವ ರಿಕ್ತ ತ್ಯಾಜ್ಯವನ್ನು ತೆಗೆದು ಹಾಕಲು ತಮ್ಮ ಪಂಚಾಯತಿಯ ವ್ಯಾಪ್ತಿಯಲ್ಲಿ ಶಾಲಾ/ಕಾಲೇಜು/ರಾಷ್ಟ್ರೀಯ ಸ್ವಯಂ ಸೇವಾ ಸಂಘಗಳಿಂದ ವಾರದಲ್ಲಿ ಒಂದು ದಿನ ಶ್ರಮದಾನ ಕಾರ್ಯಕ್ರಮವನ್ನು ಆಯೋಜಿಸುವುದು.
- ಗ್ರಾಮ ಪಂಚಾಯತ್‌ನ ಸೇವಾ ವಿತರಣಾ ಘಟಕಗಳಿಂದ (ಅಂಗನವಾಡಿ, ಶಾಲೆ, ಗ್ರಂಥಾಲಯ, PHC/HWC, ಹಾಸ್ಟೆಲ್‌ಗಳು, ಪಶುವೈದ್ಯಕೀಯ ಚಿಕಿತ್ಸಾಲಯಗಳು) ಅಪಾಯಕಾರಿಯಲ್ಲದ ಒಣ ಘನ ತ್ಯಾಜ್ಯ ಗಳನ್ನು ಮಾತ್ರ ಸಂಗ್ರಹಿಸುವುದು ಮತ್ತು ಅವುಗಳ ಬಳಕೆದಾರರ ಶುಲ್ಕವನ್ನು ಗ್ರಾಮ ಪಂಚಾಯತಿಯು ಪಾವತಿಸುವುದು.
- ಗ್ರಾಮ ಪಂಚಾಯತಿ ವ್ಯಾಪ್ತಿಯ ಅಂಗಡಿಗಳಲ್ಲಿ ಏಕ ಬಳಕೆಯ ಪ್ಲಾಸ್ಟಿಕ್ ಅನ್ನು ಕಡ್ಡಾಯವಾಗಿ ನಿಷೇಧಿಸಲು ಸೂಚಿಸುವುದು, ಮತ್ತು ನಿಯಮ ಉಲ್ಲಂಘಿಸಿದ್ದಲ್ಲಿ ಅಂತಹ ಅಂಗಡಿ ಮಾಲೀಕರಿಗೆ ದಂಡ ವಿಧಿಸುವುದು ಅಥವಾ ಪರವಾನಿಗೆಯನ್ನು ರದ್ದುಗೊಳಿಸುವುದು.
- ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಘನ ತ್ಯಾಜ್ಯ ಸಂಗ್ರಹಣೆ ವಿಲೇವಾರಿ ಕಾರ್ಯನಿರ್ವಸುತ್ತಿರುವ ಸ್ವ-ಸಹಾಯ ಸಂಘದ ಸದಸ್ಯರಿಗೆ ಸುರಕ್ಷತೆಯ ದೃಷ್ಟಿಯಿಂದ ಕೈಗವಚ, ಮೇಲ್ಹೊದಿಕೆ (Apron), ಗಮ್ ಬೂಟ್ಸ್‌ಗಳನ್ನು ಉಲ್ಲೇಖ (3)ರ ಆದೇಶದಂತೆ ಖರೀದಿಸಿ ವಿತರಿಸುವುದು.
- ಎಲ್ಲಾ ಗ್ರಾಮ ಪಂಚಾಯತಿಗಳು ಸ್ಟೀಲ್ ಲೋಟಗಳು ಹಾಗೂ ತಟ್ಟೆಗಳನ್ನು ಬಳಸುವುದು ಹಾಗೂ ಏಕ ಬಳಕೆಯ ಪ್ಲಾಸ್ಟಿಕ್ ಉಪಯೋಗಿಸದೇ ಇತರರಿಗೆ ಮಾದರಿಯಾಗಬೇಕು ಮತ್ತು ಗ್ರಾಮ ಪಂಚಾಯಿತಿಯ ಸುತ್ತ-ಮುತ್ತ ಏಕ ಬಳಕೆಯ ಪ್ಲಾಸ್ಟಿಕ್ ಬಳಕೆಯ ನಿರ್ಬಂಧದ ಕುರಿತು ಅರಿವು ಮೂಡಿಸುವುದು.
- ಜಿಪಿಎಲ್ಎಫ್/ಸ್ವ ಸಹಾಯ ಸಂಘಗಳು ಆರ್ಥಿಕ ಸುಸ್ಥಿರತೆ ಸಾಧಿಸುವವರೆಗೆ ಗ್ರಾ.ಪಂ.ಗಳು ಅನುಬಂಧ 12 ರಲ್ಲಿ ನೀಡಿರುವ ಆಯವ್ಯಯ ಲೆಕ್ಕಾಚಾರದ ಆಧಾರದ ಮೇಲೆ

ಕಾರ್ಯಸಾಧ್ಯತೆಯ ಅಂತರ ನಿಧಿ (Viability Gap Fund (VGF)) ಯನ್ನು ಡಿಪಿಎಲ್‌ಎಫ್/ಸ್ವ ಸಹಾಯ ಸಂಘಗಳಿಗೆ ನೀಡುವುದು.

**ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು (ಪಂ.ರಾಜ್)**

**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ**

## ಅನುಬಂಧ-1: ಘನ ತ್ಯಾಜ್ಯ ವಿಂಗಡಣೆ

ವಿಂಗಡನೆಯ ಉದ್ದೇಶಕ್ಕಾಗಿ ಹಸಿ ತ್ಯಾಜ್ಯ, ಒಣ ತ್ಯಾಜ್ಯ, ಗೃಹ ಉತ್ಪಾದಿತ ಅಪಾಯಕಾರಿ ತ್ಯಾಜ್ಯ ಮತ್ತು ನೈರ್ಮಲ್ಯ ತ್ಯಾಜ್ಯಗಳ ವಿವರಣಾತ್ಮಕ ಪಟ್ಟಿ[1]

**ಭಾಗ-1 ಹಸಿ ತ್ಯಾಜ್ಯಗಳ ವಿವರಣಾತ್ಮಕ ಪಟ್ಟಿ**

- ಹಣ್ಣುಗಳು ಮತ್ತು ತರಕಾರಿಗಳ ಸಿಪ್ಪೆಗಳು ಒಳಗೊಂಡಂತೆ ಅಡುಗೆ ಕೋಣೆ/ ಮಾರುಕಟ್ಟೆ ತ್ಯಾಜ್ಯಗಳು, ಸೇವಿಸದೆ ಬಿಟ್ಟ ಅಥವಾ ಹಳಸಿದ ಆಹಾರ ಚಹಾ ಸೊಪ್ಪುಗಳು ಮತ್ತು ಮೊಟ್ಟೆಯ ಚಿಪ್ಪುಗಳು(ಮೇಲು ಸಿಪ್ಪೆ)
- ಮಾಂಸ ಮತ್ತು ಎಲುಬುಗಳು
- ಹೂವುಗಳು ಒಳಗೊಂಡಂತೆ ಎಲೆಯ ಕಸ (ತ್ಯಾಜ್ಯ)
- ತೆಂಗಿನ ಚಿಪ್ಪುಗಳು
- ಮರ/ಎಲೆಗಳ ಹೊಟ್ಟು

**ಭಾಗ-2 ಒಣ ತ್ಯಾಜ್ಯಗಳ ವಿವರಣಾತ್ಮಕ ಪಟ್ಟಿ**

- ವರ್ತಮಾನ ಪತ್ರಿಕೆಗಳು
- ಕಾಗದ, ಪುಸ್ತಕಗಳು ಮತ್ತು ನಿಯತಕಾಲಿಕಗಳು
- ಗಾಜು
- ಲೋಹದ ವಸ್ತುಗಳು ಮತ್ತು ತಂತಿಗಳು
- ಪ್ಲಾಸ್ಟಿಕ್
- ಅಲ್ಯುಮಿನಿಯಮ್ ಡಬ್ಬಗಳು
- ಮರ/ ಪೀಠೋಪಕರಣಗಳು
- ಪ್ಯಾಕೇಜ್ ವಸ್ತುಗಳು
- ಬಟ್ಟೆಗಳು
- ಸ್ಟೈರೋಫೋಮ್
- ಥರ್ಮಾಕೋಲ್

---

[1] ಉಲ್ಲೇಖ 5: ಕರ್ನಾಟಕ ರಾಜ್ಯ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ರೂಪಿಸಿರುವ ನೈರ್ಮಲ್ಯ ನೀತಿ ಕಾರ್ಯತಂತ್ರ ಮತ್ತು ಮಾದರಿ ಉಪವಿಧಿಗಳು

**ಭಾಗ-3 ಗೃಹೋತ್ಪಾದಿತ ಅಪಾಯಕಾರಿ ತ್ಯಾಜ್ಯ ಮತ್ತು ನೈರ್ಮಲ್ಯ ತ್ಯಾಜ್ಯಗಳ ವಿವರಣಾತ್ಮಕ ಪಟ್ಟಿ**

**ಭಾಗ 3-1: ಗೃಹೋತ್ಪಾದಿತ ಅಪಾಯಕಾರಿ ತ್ಯಾಜ್ಯಗಳ ವಿವರಣಾತ್ಮಕ ಪಟ್ಟಿ**

- ಏರೋಸಾಲ್ ಡಬ್ಬಗಳು
- ಮನೆಗಳ ಅಡುಗೆಕೋಣೆ ಮತ್ತು ಮೋರಿ ಸ್ವಚ್ಛಗೊಳಿಸುವ ವಸ್ತುಗಳು
- ಬ್ಯಾಟರಿಗಳು, ಎಣ್ಣೆ ಶೋಧಕಗಳು( ಆಯಿಲ್ ಫಿಲ್ಟರ್), ಮತ್ತು ಕಾರುಗಳ ಸ್ವಚ್ಛತೆಯ ಉತ್ಪನ್ನಗಳು ಮತ್ತು ಬಳಕೆ ವಸ್ತುಗಳು
- ಉಪಯೋಗವಿಲ್ಲದ ಎಣ್ಣೆ, ರಾಸಾಯನಿಕಗಳು ಮತ್ತು ಕರಗುವ ವಸ್ತುಗಳು ಮತ್ತು ಅವುಗಳ ಖಾಲಿ ಡಬ್ಬಿಗಳು
- ಅಲಂಕಾರಿಕ ವಸ್ತುಗಳು, ರಾಸಾಯನಿಕ ಆಧಾರಿತ ಕೀಟನಾಶಕಗಳು ಮತ್ತು ಅವುಗಳ ಖಾಲಿಡಬ್ಬಗಳು
- ಅವಧಿ ಮುಗಿದ ಮತ್ತು ಇತರ ಉಪಯೋಗಿಸದ ಔಷಧಗಳು
- ಬಣ್ಣಗಳು, ಎಣ್ಣೆ, ಕೀಲೆಣ್ಣೆ, ಅಂಟುಗಳು, ತೆಳು ದ್ರಾವಕ ಮತ್ತು ಅವುಗಳ ಖಾಲಿಡಬ್ಬಗಳು
- ಕೀಟನಾಶಕಗಳು ಮತ್ತು ಸಸ್ಯನಾಶಕಗಳು ಮತ್ತು ಅವುಗಳ ಖಾಲಿ ಡಬ್ಬಗಳು
- ಛಾಯಾಗ್ರಹಣದ ರಾಸಾಯನಿಕಗಳು
- ಥರ್ಮಾಮೀಟರ್ ಮತ್ತು ಪಾದರಸವನ್ನು ಹೊಂದಿರುವ ಉತ್ಪನ್ನಗಳು

**ಭಾಗ 3-2 ನೈರ್ಮಲ್ಯತ್ಯಾಜ್ಯದ ವಿವರಣಾತ್ಮಕ ಪಟ್ಟಿ**

- ಬಳಕೆ ಮಾಡಿದ ಡೈಪರ್‌ಗಳು
- ನೈರ್ಮಲ್ಯ ಟವಲುಗಳು, ಅಥವಾ ನ್ಯಾಪ್‌ಕಿನ್‌ಗಳು, ಋತುಸ್ರಾವದಲ್ಲಿ ಬಳಕೆ ಮಾಡಲಾದ ಬಟ್ಟೆಗಳು ಮತ್ತು ಶಾರೀರಿಕ ದ್ರವಗಳನ್ನು ಒಳಗೊಂಡಂತಹ ಅದೇ ಮಾದರಿಯ ವಸ್ತುಗಳು
- ಗರ್ಭನಿರೋಧಕ ಚೀಲಗಳು
- ಬ್ಯಾಂಡ್‌ಏಡ್, ಗೃಹಬಳಕೆ ಆದಂತಹ ಸ್ಯಾನಿಟರಿ ತೆಳು ಬಟ್ಟೆ ಮತ್ತು ಕೊಳಕು ಹತ್ತಿ
- ಮನೆಗಳಲ್ಲಿ ಬಳಸಿದ ಸಿರಿಂಜ್‌ಗಳು
- ಗರ್ಭಧಾರಣ ಖಾತರಿ ಕಿಟ್
- ಮಧುಮೇಹ ಪರೀಕ್ಷೆ ಸ್ಟ್ರಿಪ್ಸ್ ಮತ್ತು ಸೂಜಿಗಳು ಇತ್ಯಾದಿ.

## ಅನುಬಂಧ-2: ಘನತ್ಯಾಜ್ಯ ಸಂಗ್ರಹಣೆ ಮತ್ತು ಸಾಗಾಣಿಕೆಗಾಗಿ ಮಾನವ ಸಂಪನ್ಮೂಲ ಮತ್ತು ವಾಹನಗಳು

1. ಸಂಗ್ರಹಣೆ ಮತ್ತು ಸಾಗಾಣಿಕೆಗಾಗಿ ಮಾನವ ಸಂಪನ್ಮೂಲ ಮತ್ತು ವಾಹನಗಳು[2]

| ವಾಹನಗಳ ಮಾದರಿ | ಜನಸಾಂದ್ರತೆ (ಪ್ರತಿಚದರ ಕಿ.ಮೀಗೆ ಮತ್ತು ಭೂ ಪ್ರದೇಶ | ಒಯ್ಯುವ ಸಾಮರ್ಥ್ಯ | ವಾಹನಗಳ ಸಂಖ್ಯೆ | ಮಾನವ ಶಕ್ತಿಯ ಹಂಚಿಕೆಯ ಆಧಾರ |
|---|---|---|---|---|
| **ಪ್ರಾಥಮಿಕ ಸಂಗ್ರಹಣೆ** | | | | |
| ತಳ್ಳುಗಾಡಿ[3] | ದಟ್ಟಎಂದರೆ (>ಪ್ರತಿಚದರ ಕಿ.ಮೀ ಗೆ 400 ಜನ) ಮಟ್ಟಸ ಭೂಮಿ ಮತ್ತುಕಿರು ರಸ್ತೆಗಳು | 250 ಎಲ್/125 ಕೆ.ಜಿ | 300 ಮನೆಗಳು ಮತ್ತು ಸಣ್ಣ ಅಂಗಡಿಗಳಿಗೆ ತಳ್ಳುಗಾಡಿ | 150 ಮನೆಗಳು ಮತ್ತು ಸಣ್ಣ ಅಂಗಡಿಗಳಿಗೆ ಒಬ್ಬರಂತೆ ಮನೆ ಮನೆಯಿಂದಲೂ ಸಂಗ್ರಹಣೆ<br>240 ಮನೆಗಳು ಮತ್ತು ಸಣ್ಣ ಅಂಗಡಿಗಳಿಗೆ ಒಬ್ಬರಂತೆ ಬೀದಿಗಳಲ್ಲಿ ಸೀಟಿ ಊದುವುದು ಅಥವಾ ಬಾಯಿಂದ ಕೂಗುವ ಮೂಲಕ ಪ್ರಕಟಣೆ |
| ತುಳಿಯುವ ಮೂರುಚಕ್ರದ ಟ್ರೈಸಿಕಲ್[4] | ಮಧ್ಯಮವಾದ ದಟ್ಟಣೆಯ ಜನಸಂಖ್ಯೆಯಿದ್ದಲ್ಲಿ (ಪ್ರತಿ ಚದರ ಕಿಮೀಗೆ <400 ಜನಸಂಖ್ಯೆ) ಮಟ್ಟಸ ಭೂಮಿ ಮತ್ತುಕಿರು ರಸ್ತೆಗಳು | 500ಎಲ್ 250 ಕಜಿ | ಪ್ರತಿ 300 ಮನೆಗಳು ಮತ್ತು ಸಣ್ಣ ಅಂಗಡಿಗಳಿಗೆ ಒಂದು ತುಳಿಯುವ ಟ್ರೈಸಿಕಲ್ | ಪ್ರತಿ 150 ಮನೆಗಳಿಗೆ ಮತ್ತು ಸಣ್ಣ ಅಂಗಡಿಗಳಿಗೆ ಒಬ್ಬರಂತೆ<br>ಪ್ರತಿ 240 ಮನೆಗಳು ಮತ್ತು ಸಣ್ಣ ಅಂಗಡಿಗಳಿಗೆ ಒಬ್ಬರಂತೆ ಬೀದಿಗಳಲ್ಲಿ ಸೀಟಿ ಊದುವುದು ಅಥವಾ ಕೂಗುವ ಮೂಲಕ ಪ್ರಕಟಣೆ |

[2] ಉಲ್ಲೇಖ 5: ಕರ್ನಾಟಕ ರಾಜ್ಯ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ರೂಪಿಸಿರುವ ನೈರ್ಮಲ್ಯ ನೀತಿ ಕಾರ್ಯತಂತ್ರ ಮತ್ತು ಮಾದರಿ ಉಪವಿಧಿಗಳು

[3] ಒಂದು ವೇಳೆ ಅತೀದೂರದ ಸಂಗ್ರಹಣಾ ಕೇಂದ್ರವು 500 ಮೀಗಳಿಗಿಂತಲೂ ದೂರವಿದ್ದಲ್ಲಿ ದ್ವಿತೀಯ ಹಂತದ ಸಂಗ್ರಹಣಾ ವಾಹನದ ಅಗತ್ಯವಿರುತ್ತದೆ

[4] ಒಂದು ವೇಳೆ ಅತೀದೂರದ ಸಂಗ್ರಹಣಾ ಕೇಂದ್ರವು 2 ಕಿಮೀಗಳಿಗಿಂತಲೂ ದೂರವಿದ್ದಲ್ಲಿ ದ್ವಿತೀಯ ಹಂತದ ಸಂಗ್ರಹಣಾ ವಾಹನದ ಅಗತ್ಯವಿರುತ್ತದೆ.

| | | | | |
|---|---|---|---|---|
| ವಿದ್ಯುತ್ ಚಾಲಿತ ವಾಹನ ಅಥವಾ ಇತರ ಯಾವುದೇ ಸಣ್ಣ ಮೋಟಾರು ವಾಹನ[5] | ಅತೀ ವಿರಳ ಎಂದರೆ (ಪ್ರತಿಚದರ ಕಿಮೀಗೆ <200 ಜನಸಂಖ್ಯೆಯಲ್ಲಿಗುಡ್ಡಗಾಡು ಪ್ರದೇಶ/ಅಗಲ ರಸ್ತೆಯಿದ್ದಲ್ಲಿ) | 1000 ಎಲ್/350 ಕೆಜಿ | ಪ್ರತಿ 200 ಮನೆಗಳೂ ಮತ್ತು ಸಣ್ಣ ಅಂಗಡಿಗಳಿಗೆ ಒಂದು ವಿದ್ಯುತ್/ ಮೋಟಾರು ವಾಹನ | ಪ್ರತಿ ವಾಹನಕ್ಕೆ ಒಬ್ಬರು ಚಾಲಕರು |
| ಟಿಪ್ಪರುಗಳು[6] | ಜನಸಾಂದ್ರತೆಯನ್ನು ಹೊರತು ಪಡಿಸಿ ಮತ್ತು ಭೂ ಪ್ರದೇಶದ ಸ್ವರೂಪವನ್ನು ಬಿಟ್ಟುಅತಿ ಅಗಲವಾದ ರಸ್ತೆಗಳಲ್ಲಿ (ಕಿರು ಓಣಿಗಳಿದ್ದಲ್ಲಿ ತಳ್ಳುಗಾಡಿಯ ಬೆಂಬಲವನ್ನು ಪಡೆಯಬೇಕು | 1500 ಎಲ್ 750-1000 ಕೆಜಿ | (1) ಪ್ರತಿ 800 ಮನೆಗಳು ಮತ್ತು ಸಣ್ಣ ಅಂಗಡಿಗಳಿಗೆ ಒಂದು<br>(2) ದಿನವೊಂದಕ್ಕೆ 100 ಕೆಜಿಗಿಂತಲೂ ಅಧಿಕ ತ್ಯಾಜ್ಯದ ಉತ್ಪಾದನೆಯಾದಲ್ಲಿ ಸಾಗಾಣಿಕೆಗೆ ಪ್ರತ್ಯೇಕ ವಾಹನಗಳ ಅಗತ್ಯವಿರುತ್ತದೆ | ಪ್ರತಿ ವಾಹನಕ್ಕೆ ಒಬ್ಬರು ಚಾಲಕರು ಮತ್ತುಒಬ್ಬರು ಸಹಾಯಕರು/ತ್ಯಾಜ್ಯವನ್ನು ವಾಹನಕ್ಕೆ ತುಂಬಿಸುವವರು |

| ದ್ವಿತೀಯ ಹಂತದ ಸಂಗ್ರಹಣೆ | | | | |
|---|---|---|---|---|
| ಟಿಪ್ಪರುಗಳು | - | 1500ಎಲ್ 750-1000 ಕೆಜಿ | ಪ್ರತಿ 2000 ಮನೆಗಳಿಗೆ ಮತ್ತು ಸಣ್ಣ ಅಂಗಡಿಗಳಿಗೆ ಒಂದು | ಪ್ರತಿ ವಾಹನಕ್ಕೆ ಒಬ್ಬರು ಚಾಲಕರು ಮತ್ತುಒಬ್ಬರು ಸಹಾಯಕರು |
| ಟ್ರಾಕ್ಟರ್ | - | 4000-5000 ಕೆಜಿ | ಇದನ್ನು ಬಹು ಗ್ರಾಮ ಪಂಚಾಯತಿಗಳ ಘನ ತ್ಯಾಜ್ಯ ನಿರ್ವಹಣಾ ಯೋಜನೆಗಳಿಗೆ ಪರಿಗಣಿಸತಕ್ಕದ್ದು | ಗ್ರಾಮ ಪಂಚಾಯತಿ ಹಂತದಲ್ಲಿ ಅನ್ವಯವಾಗತಕ್ಕದ್ದಲ್ಲ |

[5] ಒಂದು ವೇಳೆ ಅತೀದೂರದ ಸಂಗ್ರಹಣಾ ಕೇಂದ್ರವು 5 ಕಿಮೀಗಳಿಗಿಂತಲೂ ದೂರವಿದ್ದಲ್ಲಿ ದ್ವಿತೀಯ ಹಂತದ ಸಂಗ್ರಹಣಾ ವಾಹನದ ಅಗತ್ಯವಿರುವುದಿಲ್ಲ.

[6] ಒಂದು ವೇಳೆ ಅತೀದೂರದ ಸಂಗ್ರಹಣಾ ಕೇಂದ್ರವು 5 ಕಿಮೀಗಳಿಗಿಂತಲೂ ದೂರವಿದ್ದಲ್ಲಿ ದ್ವಿತೀಯ ಹಂತದ ಸಂಗ್ರಹಣಾ ವಾಹನದ ಅಗತ್ಯವಿರುವುದಿಲ್ಲ.

| | | | | |
|---|---|---|---|---|
| ಟ್ರಕ್ಕುಗಳು | - | 6000 ಕೆಜಿ | ಇದನ್ನು ಬಹು ಗ್ರಾಮ ಪಂಚಾಯತಿಗಳ ಘನ ತ್ಯಾಜ್ಯ ನಿರ್ವಹಣಾ ಯೋಜನೆಗಳಿಗೆ ಪರಿಗಣಿಸತಕ್ಕದ್ದು | ಗ್ರಾಮ ಪಂಚಾಯತಿ ಹಂತದಲ್ಲಿ ಅನ್ವಯವಾಗತಕ್ಕದ್ದಲ್ಲ |

**2. ಹಸಿ ತ್ಯಾಜ್ಯ ನಿರ್ವಹಣೆ ಮತ್ತು ಒಣ ತ್ಯಾಜ್ಯದ ವಿಂಗಡಣೆಗೆ ಮಾನವ ಶಕ್ತಿ**

- ಒಂದು ವೇಳೆ ಸ್ವೀಕೃತವಾಗುವ ಹಸಿ ತ್ಯಾಜ್ಯದ ಪ್ರಮಾಣವು ದಿನವೊಂದಕ್ಕೆ 200 ಕೆ.ಜಿಗಳಿಗಿಂತ ಕಡಿಮೆ ಇದ್ದಲ್ಲಿ ಮತ್ತು 2-3 ಗಂಟೆಗಳ ಅವಧಿಯ ಕೆಲಸವಿದ್ದಲ್ಲಿ ಕಾಂಪೋಸ್ಟನ್ನು ತಯಾರಿಸಲು ಒಬ್ಬರನ್ನು ನಿಯೋಜಿಸುವುದು.
- ದ್ವಿತೀಯ ಹಂತದ ಒಣ ತ್ಯಾಜ್ಯವನ್ನು 8 ವಿವಿಧ ವರ್ಗಗಳಾಗಿ ವಿಂಗಡಿಸಬೇಕಾದಲ್ಲಿ ಪ್ರತಿ ಓರ್ವ ವ್ಯಕ್ತಿಗೆ ಒಂದು ಗಂಟೆಯ ಅವಧಿಗೆ 16-22 ಕೆ.ಜಿಗಳನ್ನು ವಿಂಗಡಣೆಗೆ ನೀಡಬಹುದು.

**ಟಿಪ್ಪಣಿಗಳು**

- ಸಂಗ್ರಹಣೆಯನ್ನು 6 ಗಂಟೆಗಳ ಅವಧಿಯ ಒಂದೇ ಪಾಳಿಯಲ್ಲಿ ಅಥವಾ ತಲಾ ಮುಂಜಾನೆ ಮತ್ತು ಸಂಜೆ ತಲಾ 3 ಗಂಟೆಗಳ ಎರಡು ಪಾಳಿಗಳಲ್ಲಿ ಮಾಡಬಹುದು
- ಪ್ರತಿಯೊಂದು ಪ್ರಾಥಮಿಕ ತ್ಯಾಜ್ಯ ಸಂಗ್ರಹಣಾ ವಾಹನವು ಇಬ್ಬರನ್ನು ಹೊಂದಿದ್ದು ಅವರಿಬ್ಬರೂ ಸಹ ಕೇವಲ ಒಬ್ಬರು ಸಂಗ್ರಹಕರಿಗೆ ಹೋಲಿಸಿದಲ್ಲಿ ಎರಡು ಪಟ್ಟು ಮನೆಗಳಿಂದ ಸಂಗ್ರಹಣೆ ಮಾಡಬಹುದು.
- ಸಂಗ್ರಹಣೆಯ ತರುವಾಯ, ಸಂಗ್ರಹಣಾ ಸಿಬ್ಬಂದಿಗಳು/ಒಕ್ಕೂಟದ ಸದಸ್ಯರನ್ನು ಎರಡು ಗಂಟೆಗಳ ಅವಧಿಗೆ ಒಣ ತ್ಯಾಜ್ಯ ದಾಸ್ತಾನು ಕೊಠಡಿಯಲ್ಲಿ ವಿಂಗಡಣೆಗಾಗಿ ಮಧ್ಯಾಹ್ನ ತೊಡಗಿಸಿಕೊಳ್ಳಬಹುದು.
- ಪರ್ಯಾಯವಾಗಿ, ಗ್ರಾಮಪಂಚಾಯತಿಯು ಒಕ್ಕೂಟದ ಸದಸ್ಯರನ್ನು ಹಸಿ ತ್ಯಾಜ್ಯ ಸಂಸ್ಕರಣಾ ಘಟಕದಲ್ಲಿ ದ್ವಿತೀಯ ಹಂತದ ಒಣ ತ್ಯಾಜ್ಯ ವಿಂಗಡಣಾ ಕಾರ್ಯ ನಿರ್ವಹಿಸಲು ಬಳಕೆ ಮಾಡಿಕೊಳ್ಳಬಹುದು.
- ಒಕ್ಕೂಟದ ಸದಸ್ಯರನ್ನು ಗ್ರಾಮದ ಕಸವನ್ನು ಗುಡಿಸುವಕಾರ್ಯಕ್ಕೂ ಸಹ ಬಳಕೆ ಮಾಡಿಕೊಳ್ಳಬಹುದು ಮತ್ತು ಅದಕ್ಕೆ ಪ್ರತ್ಯೇಕವಾಗಿ ಗೌರವಧನ ನೀಡುವುದು.
- ಒಂದು ವೇಳೆ ಅತೀದೂರದ ಸಂಗ್ರಹಣಾ ಕೇಂದ್ರವು 5 ಕಿಮೀಗಳಿಗಿಂತಲೂ ದೂರವಿದ್ದಲ್ಲಿ ದ್ವಿತೀಯ ಹಂತದ ಸಂಗ್ರಹಣಾ ವಾಹನದ ಅಗತ್ಯವಿರುವುದಿಲ್ಲ.
- ಒಂದು ವೇಳೆ ಒಣತ್ಯಾಜ್ಯವು ಒಣ ತ್ಯಾಜ್ಯ ದಾಸ್ತಾನು ಕೊಠಡಿಯಿಂದ ಸಮೀಪದ ಯುಎಲ್‌ಬಿ/ನಗರ ಪಂಚಾಯತಿ ಒಟ್ಟುಗೂಡಿಸುವ ಕೇಂದ್ರಕ್ಕೆ ಸ್ಥಳಾಂತರಗೊಂಡಲ್ಲಿ, ಗ್ರಾಮ ಪಂಚಾಯತಿಯು ಟ್ರಾಕ್ಟರ್‌ಗಳು ಮತ್ತು ಟ್ರಕ್ಕುಗಳನ್ನು ಖರೀದಿಸುವ ಬದಲಿಗೆ ಗುತ್ತಿಗೆ ಪಡೆಯುವ ಕುರಿತು ಪರಿಗಣಿಸಬಹುದು.

**ಅನುಬಂಧ -3: ಮಾದರಿ ಘನ ತ್ಯಾಜ್ಯ ಸಂಗ್ರಹಣೆ ವಾಹನ ಬಾಡಿಗೆ ಒಪ್ಪಂದ ಮತ್ತು ವಾಹನ ಬಾಡಿಗೆ ರಶೀದಿ**

## ಮಾದರಿ ವಾಹನ ಬಾಡಿಗೆ ಒಪ್ಪಂದ ಪತ್ರ

ಈ ವಾಹನ ಬಾಡಿಗೆ ಒಪ್ಪಂದವು (ಇನ್ನು ಮುಂದೆ "ಒಪ್ಪಂದ" ಎಂದು ಉಲ್ಲೇಖಿಸಲಾಗುತ್ತದೆ) .................. (ದಿನಾಂಕ) ರಂದು .................. (ಗ್ರಾ. ಪಂ ಹೆಸರು ಮತ್ತು ವಿಳಾಸ) ಮತ್ತು.................................. (ಜಿಪಿಎಲ್‌ಎಫ್ ಹೆಸರು ಮತ್ತು ವಿಳಾಸ) ನಡುವೆ ಇದ್ದು, ಒಟ್ಟಾಗಿ 'ಪಕ್ಷಗಳು' ಎಂದು ಉಲ್ಲೇಖಿಸಲಾಗುತ್ತದೆ. ಇಬ್ಬರೂ ಈ ಒಪ್ಪಂದಕ್ಕೆ ಬದ್ಧರಾಗಿರಲು ಒಪ್ಪುತ್ತಾರೆ.

1. ಈ ಒಪ್ಪಂದದ ಪ್ರಕಾರ.................................ಗ್ರಾಮ ಪಂಚಾಯತಿಯು (ಗ್ರಾ. ಪಂ ಹೆಸರು) .................................. ಒಕ್ಕೂಟಕ್ಕೆ (GPLF ನ ಹೆಸರು) .................................. (ವಾಹನ ಪ್ರಕಾರ ಮತ್ತು ಕಂಪನಿ) .................................. (ವಾಹನ ಸಂಖ್ಯೆ) ವಾಹನವನ್ನು ಒಂದು ವರ್ಷದ ಅವಧಿಗೆ ಬಾಡಿಗೆಗೆ ಒದಗಿಸುತ್ತದೆ
2. ಕೆಳಗೆ ಪಟ್ಟಿ ಮಾಡಲಾದ ಅಗತ್ಯ ವಾಹನ ದಾಖಲೆಗಳನ್ನು ಸಹ .................. ಒಕ್ಕೂಟಕ್ಕೆ ಹಸ್ತಾಂತರಿಸಲಾಗಿದೆ
    - ನೋಂದಣಿ ಪ್ರಮಾಣಪತ್ರ (RC)
    - ಮಾಲಿನ್ಯ ನಿಯಂತ್ರಣ ಪ್ರಮಾಣಪತ್ರ (PUCC)
    - ವಾಹನ ವಿಮೆಯ ಪ್ರಮಾಣಪತ್ರ
3. ವಾಹನದ ಬಾಡಿಗೆಯ ಮೊತ್ತವು ತಿಂಗಳಿಗೆ .................. ರೂಪಾಯಿ.
4. ವಾಹನದ ಸಂಪೂರ್ಣ ಮೌಲ್ಯವು ... ........................(ತಿಂಗಳು ಮತ್ತು ವರ್ಷ)ರಂತೆ .................. ರೂಪಾಯಿ ಆಗಿದೆ (ವಾಹನ ಬೆಲೆ).
5. ಈ ಒಪ್ಪಂದವು .................................. ರಂದು ಪ್ರಾರಂಭವಾಗುತ್ತದೆ ಮತ್ತು ವಾಹನವನ್ನು ಗ್ರಾ. ಪಂ ಗೆ ಅಧಿಕೃತವಾಗಿ ಹಿಂತಿರುಗಿಸುವವರೆಗೆ ಪರಿಣಾಮದಲ್ಲಿ ಉಳಿಯುತ್ತದೆ.
6. ಯಾವುದೇ ಕಾರಣದಿಂದ ವಾಹನದ ಕಳ್ಳತನ, ಹಾನಿ, ನಷ್ಟ ಅಥವಾ ಸಂಶದ ಅಪಾಯಕ್ಕೆ ಬಾಡಿಗೆದಾರರು ಜವಾಬ್ದಾರರಾಗಿರುತ್ತಾರೆ ಬಾಡಿಗೆದಾರರ ವಶದಲ್ಲಿರುವಾಗ ವಾಹನವು ಹಾನಿಗೊಳಗಾದರೆ, ವಾಹನದ ಪ್ರಸ್ತುತ ಮೌಲ್ಯದವರೆಗೆ ಯಾವುದೇ ಮತ್ತು ಎಲ್ಲಾ ದುರಸ್ತಿ ವೆಚ್ಚಗಳನ್ನು ಪಾವತಿಸಲು ಬಾಡಿಗೆದಾರರು ಒಪ್ಪುತ್ತಾರೆ. ಬಾಡಿಗೆದಾರರ ಸ್ವಾಧೀನದಲ್ಲಿರುವಾಗ, ವಾಹನವು ಕಳೆದುಹೋದರೆ, ಬಾಡಿಗೆದಾರರು ಅದರ ಪ್ರಸ್ತುತ ಮೌಲ್ಯವನ್ನು ಮಾಲೀಕರಿಗೆ ಪಾವತಿಸಲು ಒಪ್ಪಿಕೊಳ್ಳುತ್ತಾರೆ.
7. ವಾಹನವನ್ನು ಗ್ರಾ.ಪಂ.ಯ ಸೂಚನೆಗಳಿಗೆ ಅನುಗುಣವಾಗಿ ಮತ್ತು/ಅಥವಾ ವಾಹನವನ್ನು ಮೂಲತಃ ವಿನ್ಯಾಸಗೊಳಿಸಿದಂತೆ ಸರಿಯಾದ ಮತ್ತು ಎಚ್ಚರಿಕೆಯ ರೀತಿಯಲ್ಲಿ ಮಾತ್ರ ಬಳಸಬೇಕು ಎಂದು ಒಪ್ಪಿಕೊಳ್ಳಲಾಗಿದೆ

8 ಈ ಒಪ್ಪಂದವು ಮೇಲೆ ಹೇಳಿದಂತೆ ಎರಡೂ ಪಕ್ಷಗಳ ನಡುವೆ ಕಾನೂನುಬದ್ಧವಾಗಿ ಬದ್ಧವಾಗಿದೆ. ಈ ಒಪ್ಪಂದಕ್ಕೆ ಪ್ರವೇಶಿಸುವ ಅಧಿಕಾರವನ್ನು ಪ್ರತಿ ಪಕ್ಷಗಳು ಪ್ರತಿನಿಧಿಸುತ್ತವೆ

ದಿನಾಂಕ:

| | |
|---|---|
| ಸಹಿ/- | ಸಹಿ/- |
| ಅಧ್ಯಕ್ಷರು/ಕಾರ್ಯದರ್ಶಿ | ಅಧ್ಯಕ್ಷರು |
| ಸಂಜೀವಿನಿ-ಒಕ್ಕೂಟ | ----------- ಗ್ರಾಮ ಪಂಚಾಯತ್ |

**<u>ಮಾದರಿ ವಾಹನ ಬಾಡಿಗೆ ರಶೀದಿ</u>**

Panchayad Raj

ರಶೀದಿ ಸಂಖ್ಯೆ:

——————ತಿಂಗಳಿಗೆ ವಾಹನ ಬಾಡಿಗೆಯಾಗಿ............................ .. ...................(GPLF ಹೆಸರು) ನಿಂದ ............... ರೂ..............................(ಅಕ್ಷರಗಳಲ್ಲಿ).............. ................... ರೂಪಾಯಿ ಮೊತ್ತವನ್ನು ಸ್ವೀಕರಿಸಲಾಗಿದೆ.

ದಿನಾಂಕ:

ಸಹಿ/-
ಅಧ್ಯಕ್ಷರು
____________________(
ಗ್ರಾಮ ಪಂ. ಹೆಸರು)

# ಅನುಬಂಧ -4: ಮಾದರಿ ಒಪ್ಪಂದ/ಒಡಂಬಡಿಕೆ ಪತ್ರ

**ಒಪ್ಪಂದ ಪತ್ರ**

ಈ ಒಪ್ಪಂದವನ್ನು                ರಂದು (ಇನ್ನು ಮುಂದೆ "ಕಾರ್ಯಗತಗೊಳ್ಳುವ ದಿನಾಂಕ" ಎಂದು ಉಲ್ಲೇಖಿಸಲಾಗುತ್ತದೆ) ಇವರಿಂದ ಮತ್ತು ಇವರ ನಡುವೆ ಮಾಡಲಾಗಿದೆ.

**ಗ್ರಾಮ ಪಂಚಾಯತ್ ಲೆವೆಲ್ ಫೆಡರೇಷನ್**____________________ಸ್ಥಳದಲ್ಲಿ ಕಛೇರಿಯನ್ನು ಹೊಂದಿದ್ದ(ಇನ್ನು ಮುಂದೆ ಜಿಪಿಎಲ್‌ಎಫ್ ಎಂದು ಉಲ್ಲೇಖಿಸಲಾಗಿ ಕಾರ್ಯನಿರ್ವಾಹಕರು, ನಿರ್ವಾಹಕರು ಪ್ರತಿನಿಧಿಗಳು ಮತ್ತು ಅನುಮತಿಸಲಾದ ನಿಯೋಜನೆಗಳನ್ನು ಯಾವ ಸಂದರ್ಭದಲ್ಲೂ ಒಪ್ಪಿಕೊಳ್ಳುವ, ಅರ್ಥೈಸಿಕೊಳ್ಳುವುದನ್ನು ಒಳಗೊಂಡಿರುತ್ತದೆ)

**ಮತ್ತು**

**ಗ್ರಾಮ ಪಂಚಾಯತ್** ____________________ಸ್ಥಳದಲ್ಲಿ ಕಛೇರಿಯನ್ನು ಹೊಂದಿದ್ದು ಹೊಂದಿದೆ (ಇನ್ನು ಮುಂದೆ ಕಾರ್ಯನಿರ್ವಾಹಕರು, ನಿರ್ವಾಹಕರು, ಪ್ರತಿನಿಧಿಗಳು ಮತ್ತು ಅನುಮತಿಸಲಾದ ನಿಯೋಜನೆಗಳನ್ನು ಯಾವ ಸಂದರ್ಭದಲ್ಲೂ ಒಪ್ಪಿಕೊಳ್ಳುವ ಅರ್ಥೈಸಿಕೊಳ್ಳುವುದನ್ನು ಒಳಗೊಂಡಿರುತ್ತದೆ)

ಜಿಪಿಎಲ್‌ಎಫ್ ಹಾಗೂ ಗ್ರಾಮ ಪಂಚಾಯತ್ ಜಂಟಿಯಾಗಿ "ಪಾರ್ಟಿಗಳು" ಎಂದು ಮತ್ತು ಪ್ರತ್ಯೇಕವಾಗಿ "ಪಾರ್ಟಿ" ಎಂದು ಉಲ್ಲೇಖಿಸಲಾಗುತ್ತದೆ

ಇದರಂತೆ,

ಈ ಒಪ್ಪಂದದ **ಮುಖ್ಯ ಉದ್ದೇಶ**, ಗ್ರಾಮ ಪಂಚಾಯತಿ ಮತ್ತು ಸಂಜೀವಿನಿ ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟ (ಜಿಪಿಎಲ್‌ಎಫ್/ಸ್ವ-ಸಹಾಯ ಸಂಘದ ಸದಸ್ಯರು) ಜಂಟಿಯಾಗಿ, ಕೆಳಗಿನ ಗುರಿಗಳನ್ನು ಸಾಧಿಸುವುದು.

- ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಎಲ್ಲಿಯೂ ಘನತ್ಯಾಜ್ಯ ವಸ್ತುಗಳನ್ನು ಮತ್ತು ಪ್ಲಾಸ್ಟಿಕ್ ತ್ಯಾಜ್ಯವನ್ನು ಬಹಿರಂಗವಾಗಿ ಸುಡುವುದನ್ನು ತಡೆಗಟ್ಟುವುದು.
- ಗ್ರಾಮ ಪಂಚಾಯತಿಯು ಘನತ್ಯಾಜ್ಯ ನಿರ್ವಹಣೆಯಲ್ಲಿ ನಾಯಕತ್ವ ಪಾತ್ರವನ್ನು ವಹಿಸಿಕೊಂಡು, ಜಿಪಿಎಲ್‌ಎಫ್/ಸ್ವ-ಸಹಾಯ ಸಂಘದ ಸದಸ್ಯರ ಸಹಭಾಗಿತ್ವದಲ್ಲಿ ಪರಿಸರ ಸುರಕ್ಷಿತ ರೀತಿಯಲ್ಲಿ ಗ್ರಾ.ಪಂ ವ್ಯಾಪ್ತಿಯಲ್ಲಿ ಬಾಗಿಲಿನಿಂದ ಘನತ್ಯಾಜ್ಯ ಸಂಗ್ರಹಣೆಯಿಂದ ಪ್ರಾರಂಭಿಸಿ, ವೈಜ್ಞಾನಿಕವಾಗಿ ಘನ ತ್ಯಾಜ್ಯ ವಿಂಗಡಣೆ ಹಾಗೂ ವಿಲೇವಾರಿ ಮಾಡುವುದು.
- ಸಂಜೀವಿನಿ -ಕೆಎಸ್‌ಆರ್‌ಎಲ್ ಪಿಎಸ್‌ನ ಡಿ.ಪಿ.ಎಂ/ಡಿ.ಎಂ ಗಳು ಮತ್ತು ಸ್ವಚ್ಛ ಭಾರತ (ಗ್ರಾಮೀಣ) ಅಭಿಯಾನದ ಸಂಯೋಜಕ ಸಿಬ್ಬಂದಿಗಳ ಸಹಯೋಗ ಮತ್ತು ಸಮನ್ವಯತೆಯಲ್ಲಿ ಘನತ್ಯಾಜ್ಯ ನಿರ್ವಹಣೆಯ ಎಲ್ಲಾ ಹಂತಗಳ (ಮೂಲಗಳಿಂದ ಘನತ್ಯಾಜ್ಯ ಸಂಗ್ರಹಣೆ, ಸಾಗಾಣಿಕೆ, ವಿಂಗಡಣೆ ಮತ್ತು ಸಂಸ್ಕರಣೆ ಹಾಗೂ ವಿಲೇವಾರಿ ಮಾಡುವುದು) ಪರಿಣಾಮಕಾರಿ ಅನುಷ್ಠಾನಕ್ಕಾಗಿ ಕ್ರಿಯಾ ಯೋಜನೆ, ಮಾರ್ಗನಕ್ಷೆ ಹಾಗೂ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನದ ಪ್ರಕ್ರಿಯೆಗಳನ್ನು ಸಿದ್ಧಪಡಿಸಿಕೊಳ್ಳುವುದು.
- ಗ್ರಾಮ ಪಂಚಾಯತ್‌ನಲ್ಲಿನ ಘನ ತ್ಯಾಜ್ಯ ನಿರ್ವಹಣೆ ಚಟುವಟಿಕೆಗಳನ್ನು ಪರಿಶೀಲಿಸಲು ಗ್ರಾಮ ಪಂಚಾಯತ್ ಅಧ್ಯಕ್ಷರು, ಸಂಜೀವಿನಿ ಒಕ್ಕೂಟದ (GPLF) ಅಧ್ಯಕ್ಷರು, ಸಮುದಾಯ ಸಂಪನ್ಮೂಲ ವ್ಯಕ್ತಿಗಳು (community cadres such as Master Bookkeepers (MBKs) and Local Community Resource Persons (LCRPs)), ಸ್ವಚ್ಛ ಭಾರತ ಅಭಿಯಾನ(ಗ್ರಾಮೀಣ)ದ ಸಂಯೋಜಕರು, ಸಂಜೀವಿನಿ (NRLM)

ಸಂಯೋಜಕರನ್ನು ಒಳಗೊಂಡ ಸಮಿತಿಯನ್ನು ರಚಿಸುವುದು. ಸಮಿತಿಯು ಗ್ರಾಮ ಪಂಚಾಯತ್ ಮತ್ತು ಸಂಜೀವಿನಿ ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟಗಳ ನಡುವೆ ಒಪ್ಪಂದ/ಒಡಂಬಡಿಕೆಯಾದ ಮೊದಲ 3 ತಿಂಗಳ ಕಾಲ ತಿಂಗಳಿಗೊಂದು ಬಾರಿ ಹಾಗು ನಂತರ 3 ತಿಂಗಳಿಗೊಂದು ಬಾರಿ ಸಭೆ ನಡೆಸುವುದು.

- ಮಾನ್ಯವಾದ ನೋಂದಣಿಯನ್ನು ಹೊಂದಿರುವ ಮರುಬಳಕೆದಾರರಿಗೆ ಮರುಬಳಕೆ ಮಾಡಬಹುದಾದ ಪ್ಲಾಸ್ಟಿಕ್ ತ್ಯಾಜ್ಯದ ಭಾಗವನ್ನು ವಿಲೇವಾರಿ ಮಾಡುವುದು.
- ಗ್ರಾಮ ಪಂಚಾಯತಿ ವ್ಯಾಪ್ತಿಯ ಎಲ್ಲಾ ಪಾಲುದಾರರಲ್ಲಿ ತಮ್ಮ ಜವಾಬ್ದಾರಿಗಳ ಬಗ್ಗೆ ಅರಿವು ಮೂಡಿಸುವುದು.
- ಘನ ತ್ಯಾಜ್ಯವನ್ನು ಮೂಲದಲ್ಲಿಯೇ (ಮನೆಗಳು/ ವಾಣಿಜ್ಯ ಸಂಸ್ಥೆಗಳು ಇತರೆ) **3 ರೀತಿಗಳಲ್ಲಿ (ಹಸಿ ತ್ಯಾಜ್ಯಗಳು, ಒಣ ತ್ಯಾಜ್ಯಗಳು ಮತ್ತು ಅಪಾಯಕಾರಿ ತ್ಯಾಜ್ಯ)** ವಿಂಗಡಣೆ ಮಾಡಲು ಮಾಹಿತಿ, ಶಿಕ್ಷಣ ಮತ್ತು ಸಂವಹನ ಚಟುವಟಿಕೆಗಳನ್ನು ಗ್ರಾ.ಪಂ. ವ್ಯಾಪ್ತಿಯಲ್ಲಿ ಹಮ್ಮಿಕೊಳ್ಳುವುದು.
- ಗ್ರಾಮದ ಸ್ವಚ್ಛತೆ ಮತ್ತು ನೈರ್ಮಲ್ಯದ ಬಗ್ಗೆ ನಾಗರಿಕ ಪ್ರತಿಕ್ರಿಯೆಯು ಸ್ವಚ್ಛ ಸರ್ವೇಕ್ಷಣ್ ಗ್ರಾಮೀಣ್ ( https://ssg2021.in/Citizenfeedback ) ಮೂಲಕ ಸಂಗ್ರಹಿಸಲಾಗುತ್ತದೆ. ಸ್ವಚ್ಛ ಭಾರತ್ ಮಿಷನ್ ಶ್ರೇಯಾಂಕದಲ್ಲಿ ನಾಗರಿಕ ಪ್ರತಿಕ್ರಿಯೆಯು 35 ಪ್ರತಿಶತ ಪಾಲನ್ನು ಹೊಂದಿದೆ.

1. **ಗ್ರಾಮ ಪಂಚಾಯತಿಯ ಪಾತ್ರ ಮತ್ತು ಜವಾಬ್ದಾರಿಗಳು**
   - ಘನ ತ್ಯಾಜ್ಯ ನಿರ್ವಹಣಾ ಘಟಕ ಅಥವಾ ಸ್ವಚ್ಛ ಸಂಕೀರ್ಣ ಅಥವಾ ಒಣ ತ್ಯಾಜ್ಯ ಸಂಗ್ರಹಣೆ ಘಟಕಗಳನ್ನು ನಿರ್ಮಿಸಲು ಸೂಕ್ತ ಸ್ಥಳವನ್ನು ಗುರುತಿಸುವುದು. ಈ ಘಟಕಗಳಲ್ಲಿ ಹಸಿ ತ್ಯಾಜ್ಯದ ಸಂಸ್ಕರಣೆಗೆ ಮತ್ತು ಒಣ ತ್ಯಾಜ್ಯ ಸಂಪನ್ಮೂಲದ ವಿಂಗಡಣೆ ಮತ್ತು ಮಾರಾಟ ಮಾಡುವ ತನಕ ಸಂಗ್ರಹಣೆಗಾಗಿ ವ್ಯವಸ್ಥೆಯನ್ನು ಕಲ್ಪಿಸುವುದು.
   - ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಎಲ್ಲಿಯೂ ತ್ಯಾಜ್ಯ ವಸ್ತುಗಳನ್ನು ಸುಡಬಾರದು ಮತ್ತು ತ್ಯಾಜ್ಯ ವಸ್ತು ಸುಡುವುದನ್ನು ನಿಷೇದಿಸಿ ಅಧಿಸೂಚನೆ ಹೊರಡಿಸಿ ಸೂಚನಾ ಫಲಕದಲ್ಲಿ ಅಳವಡಿಸುವುದು.
   - ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಯಾವುದೇ ತರಹದ ಕಸ ಸುರಿಯುವ ಬ್ಲಾಕ್ ಸ್ಪಾಟ್ ಗಳು ಇಲ್ಲದಂತೆ ನೋಡಿಕೊಳ್ಳುವುದು. ಕೆರೆಗಳ,ಅಂಗನವಾಡಿಗಳ, ಶಾಲೆಗಳ, ದೇವಸ್ಥಾನಗಳ, ಆಟದ ಮೈದಾನಗಳ ಮತ್ತು ಇತರ ಯಾವುದೇ ಜಾಗಗಳಲ್ಲಿ ತ್ಯಾಜ್ಯವನ್ನು ಬಿಸಾಡದಂತೆ ನೋಡಿಕೊಳ್ಳುವುದು.
   - ತ್ಯಾಜ್ಯ ನಿರ್ವಹಣೆಯಲ್ಲಿ ಸ್ವಚ್ಛ ಭಾರತ ಅಭಿಯಾನ (ಗ್ರಾಮೀಣ) ಮತ್ತು ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಹಾಗು ಇತರೆ ಇಲಾಖೆಗಳ ನಿಯಮಗಳ ಉಲಂಘನೆಯಾದರೆ ಗ್ರಾಮ ಪಂಚಾಯತಿಯು ದಂಡನೆಗಳನ್ನು ವಿಧಿಸಬೇಕು. ದಂಡನೆಗಳಿಂದ ಸಂಗ್ರಹವಾದ ಹಣವನ್ನು ಘನ ತ್ಯಾಜ್ಯ ನಿರ್ವಹಣೆಗಾಗಿ ಬಳಸುವುದು
   - ಗ್ರಾಮ ಪಂಚಾಯತಿಯಿಂದ ಘನ ತ್ಯಾಜ್ಯ ನಿರ್ವಹಣೆಗಾಗಿ ಒಪ್ಪಂದ ಮಾಡಿಕೊಳ್ಳುವ ಸಂಜೀವಿನಿ ಜಿಪಿಎಲ್ಎಫ್/ಸ್ವ ಸಹಾಯ ಸಂಘಗಳಿಗೆ ವಾಹನಗಳನ್ನು ಮಾದರಿ ಒಪ್ಪಂದ ಪತ್ರದ ಮೂಲಕ ಬಾಡಿಗೆಗೆ ಒದಗಿಸಿ ವಾಹನಗಳಿಗೆ ಕಡ್ಡಾಯವಾಗಿ ಜಿಪಿಎಸ್ ಅಳವಡಿಸಿ, ವಾಹನಗಳ ಚಲನವಲನಗಳ ಬಗ್ಗೆ ಮಾಹಿತಿಯನ್ನು ಪಡೆಯುವುದು. ಬಾಡಿಗೆ ಸ್ವೀಕೃತಿ ರಶೀದಿಯನ್ನು ಸಹ ನೀಡುವುದು.
   - ಚಾಲನಾ ತರಬೇತಿ ಪಡೆದ ಜಿಪಿಎಲ್ಎಫ್ ಮಹಿಳೆಯರನ್ನು ಸ್ವಚ್ಛತಾ ವಾಹಿನಿ ಚಾಲನೆಗೆ ತೊಡಗಿಸಿಕೊಳ್ಳಬೇಕು. ಅಂತಹ ತರಬೇತಿಯನ್ನು ಪಡೆದಿರದ ಮಹಿಳೆಯರಿಗೆ 6 ತಿಂಗಳ

ಕಾಲಾವಕಾಶವನ್ನು ನೀಡಬೇಕಾಗುತ್ತದೆ. ಇದರಿಂದ ಅವರು ತರಬೇತಿಯನ್ನು ಪೂರ್ಣಗೊಳಿಸಬಹುದು.

